ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 173-185
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸರ್ಕಾರಿ ಬಾಲಮಂದಿರಗಳಲ್ಲಿ ರಕ್ಷಣೆ ಮತ್ತು ಆರೈಕೆಗೆ ಒಳಪಟ್ಟಿರುವ ಮಕ್ಕಳ ಸಾಂಸ್ಥಿಕ ಸವಲತ್ತುಗಳು

**ಮಹೇಶ ಜಿ[1] ಮತ್ತು ಡಾ.ಎಸ್.ಯಶೋದ[2]**

[1]ಸಂಶೋಧನಾ ವಿದ್ಯಾರ್ಥಿ, [2]ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರು,
ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ ಮೈಸೂರು.

***Abstract:***
*ವಿಶ್ವದ ಒಟ್ಟು ಮಕ್ಕಳಲ್ಲಿ ಶೇಕಡ 19ರಷ್ಟು ಮಕ್ಕಳಿಗೆ ಭಾರತವೇ ಮನೆಯಾಗಿದೆ. ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 36.7ರಷ್ಟು(44.4ಕೋಟಿ) ಮಕ್ಕಳೇ(0–17) ವಾಸಿಸುತ್ತಿದ್ದಾರೆ. ಅದರಲ್ಲಿ 3.5 ಕೋಟಿ ಮಕ್ಕಳು ರಕ್ಷಣೆ ಮತ್ತು ಆರೈಕೆಗೆ ಅಗತ್ಯವಿರುವ ಮಕ್ಕಳಿದ್ದಾರೆ. ಯಾವ ಮಕ್ಕಳು ಸಹಜ–ಸುಂದರವಾದ ಬಾಲ್ಯವನ್ನು ಅನುಭವಿಸದೆ, ಕುಟುಂಬ, ಸಮಾಜದಿಂದ ನಿರ್ಲಕ್ಷಿತರಾಗಿ, ದೈಹಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ಮತ್ತು ಲೈಂಗಿಕವಾಗಿ ದುರುಪಯೋಗಗೊಂಡು, ಅಪಾಯದ ಸ್ಥಿತಿಯಲ್ಲಿ ಬದುಕುತ್ತಿರುವರೋ ಅಂತಹ ಮಕ್ಕಳನ್ನು ಮಕ್ಕಳ ನ್ಯಾಯ ಕಾಯ್ದೆ – 2015 ರ ಪ್ರಕಾರ ರಕ್ಷಣೆ ಮತ್ತು ಆರೈಕೆ ಆಗತ್ಯವಿರುವ ಮಕ್ಕಳು ಎಂದು ಕರೆಯುತ್ತಾರೆ. ಈ ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಮಕ್ಕಳ ಕಲ್ಯಾಣ ಸಮಿತಿ ಮಧ್ಯಪ್ರವೇಶಿಸಿ, ಸರ್ಕಾರಿ ಬಾಲಮಂದಿರಗಳಲ್ಲಿ ಮಕ್ಕಳನ್ನು ಪುನರ್ವಸತಿ ಕಲ್ಪಿಸಿ, ನಂತರ ಸಮಾಜದೊಳಗೆ ಪುನರ್ ಸಮಾಯೋಜನೆ ಮಾಡಲಾಗುತ್ತದೆ. ಸರ್ಕಾರಿ ಬಾಲಮಂದಿರದಲ್ಲಿ ಸಾಂಸ್ಥಿಕ ಆರೈಕೆಗೆ ಒಳಗಾಗುವ ಮಕ್ಕಳಿಗೆ ಒದಗಿಸಲಾಗುವ ಮೂಲಭೂತ ಸೌಕರ್ಯ, ಶಿಕ್ಷಣ, ಮನೋರಂಜನೆ, ಆರೋಗ್ಯ–ನೈರ್ಮಲ್ಯ, ವೈದ್ಯಕೀಯ ಆರೈಕೆ, ಮಾನಸಿಕ ಆರೋಗ್ಯ, ವೃತ್ತಿಪರ ಕೌಶಲ್ಯ ತರಬೇತಿ, ಆರೈಕೆ ನಂತರದ ಯೋಜನೆ ಮೊದಲಾದ ಸವಲತ್ತುಗಳ ಬಗ್ಗೆ ಈ ಲೇಖನ ಅವಲೋಕಿಸುತ್ತದೆ.*

***Keywords:*** *ಬಾಲಮಂದಿರ, ಮಕ್ಕಳ ನ್ಯಾಯ ಕಾಯ್ದೆ, ರಕ್ಷಣೆ ಮತ್ತು ಆರೈಕೆ ಅವಶ್ಯವಿರುವ ಮಕ್ಕಳು, ಮಕ್ಕಳ ಕಲ್ಯಾಣ ಸಮಿತಿ, ಸಾಂಸ್ಥಿಕ ಸವಲತ್ತುಗಳು, ಮಕ್ಕಳ ಹಕ್ಕುಗಳು*

## ಪೀಠಿಕೆ

ನಮ್ಮ ದೇಶದ ಜನತೆ ಮತ್ತು ಆಡಳಿತ ವ್ಯವಸ್ಥೆ ‘ಮಕ್ಕಳೇ ಒಂದು ದೇಶದ ಭವಿಷ್ಯದ ಅಭಿವೃದ್ಧಿಯ ರುವಾರಿಗಳು’ ಎಂಬ ಸತ್ಯವನ್ನ ಅರಿಯಬೇಕು. ಮಕ್ಕಳು ಬೆಳೆಯಲು, ಕಲಿಯಲು ಮತ್ತು ಅಭಿವೃದ್ಧಿ ಹೊಂದಲು ಪೂರಕವಾದ ವಾತಾವರಣವನ್ನು ಮನೆಯ ಹೊರಗೆ ಮತ್ತು ಒಳಗೆ ಎಲ್ಲಾ ಮಕ್ಕಳಿಗೂ ಕಲ್ಪಿಸಬೇಕು. ಇಂದು ಎಲ್ಲಾ ಮಕ್ಕಳ ಬಾಲ್ಯವು ಹೂವಿನ ಹಾಸಿಗೆಯಾಗಿಲ್ಲ. ವಿವಿಧ ಕಾರಣಗಳಿಂದ ಸಮಾಜದಲ್ಲಿ ನಿರ್ಲಕ್ಷ್ಯತೆಗೆ, ದುರುಪಯೋಗ, ಶೋಷಣೆಗೆ ಒಳಗಾಗಿ, ಮಕ್ಕಳು ಬಲಿಪಶುಗಳಾಗುತ್ತಿದ್ದಾರೆ. ವಿಶಾಲ ಅರ್ಥದಲ್ಲಿ ಇವರನ್ನು ರಕ್ಷಣೆ ಮತ್ತು ಆರೈಕೆ ಆಗತ್ಯವಿರುವ

***Please cite this article as:*** ಮಹೇಶ, ಜಿ ಮತ್ತು ಎಸ್.ಯಶೋದ. (2026). ಸರ್ಕಾರಿ ಬಾಲಮಂದಿರಗಳಲ್ಲಿ ರಕ್ಷಣೆ ಮತ್ತು ಆರೈಕೆಗೆ ಒಳಪಟ್ಟಿರುವ ಮಕ್ಕಳ ಸಾಂಸ್ಥಿಕ ಸವಲತ್ತುಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(1), 173–185

ಮಕ್ಕಳು ಎಂದು ಕರೆಯುತ್ತಾರೆ. ಈ ಮಕ್ಕಳನ್ನು ಸಂಕಷ್ಟದಿಂದ ರಕ್ಷಣೆ ಮಾಡಿದ ನಂತರ ಮಕ್ಕಳ ಕಲ್ಯಾಣ ಸಮಿತಿ ಎದುರು ಪ್ರಸ್ತುತಪಡಿಸಲಾಗುತ್ತದೆ. ಸಮಿತಿಯು ವಿವೇಚನೆ ಬಳಸಿ ಮಗುವಿನ ಹಿತಾಸಕ್ತಿ ಕಾಪಾಡುವ ಸಲುವಾಗಿ ಕೊನೆಯ ಆಯ್ಕೆಯಾಗಿ ಸರ್ಕಾರಿ ಬಾಲಮಂದಿರದಲ್ಲಿ ತಾತ್ಕಾಲಿಕವಾಗಿ ಅಥವಾ ಮಗು ಹದಿನೆಂಟು ವರ್ಷ ಪೂರೈಸುವವರೆಗೆ ಆರೈಕೆಗಾಗಿ ಪುನರ್ವಸತಿ ಕಲ್ಪಿಸಲಾಗುತ್ತದೆ. ಒಂದು ಮಾಹಿತಿಯ ಪ್ರಕಾರ ಸರ್ಕಾರಿ ಬಾಲಮಂದಿರಗಳನ್ನು ಒಳಗೊಂಡಂತೆ ದೇಶದಲ್ಲಿ ಸರ್ಕಾರದಿಂದ ನಡೆಸಲ್ಪಡುತ್ತಿರುವ 3010 ಮಕ್ಕಳ ಆರೈಕೆ ಸಂಸ್ಥೆಯಲ್ಲಿ ಸುಮಾರು 62,592[1] ಮಕ್ಕಳು ಸಾಂಸ್ಥಿಕ ಆರೈಕೆಯಲ್ಲಿದ್ದಾರೆ. ಹಲವು ಮಕ್ಕಳ ಬಾಲ್ಯವು ಕುಟುಂಬವಿಲ್ಲದೆ ಸಂಪೂರ್ಣ ಸರ್ಕಾರಿ ಬಾಲಮಂದಿರದಲ್ಲಿಯೇ ರೂಪುಗೊಳ್ಳುತ್ತದೆ. ಸರ್ಕಾರಿ ಬಾಲಮಂದಿರಗಳು ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಹಲವು ಬಗೆಯ ಸಾಂಸ್ಥಿಕ ಸೌಲಭ್ಯಗಳನ್ನು ಹೊಂದಿರಬೇಕಾಗುತ್ತದೆ. ಆ ಸೌಲಭ್ಯಗಳ ಕುರಿತು ಈ ಮುಂದೆ ಪಕ್ಷಿನೋಟ ನೀಡಲಾಗಿದೆ.

**ರಕ್ಷಣೆ ಮತ್ತು ಆರೈಕೆ ಅವಶ್ಯವಿರುವ ಮಕ್ಕಳ ವ್ಯಾಖ್ಯಾನ**

ಮಕ್ಕಳ ನ್ಯಾಯ (ಆರೈಕೆ ಮತ್ತು ರಕ್ಷಣೆ) ಕಾಯ್ದೆ – 2015[2] ರಲ್ಲಿ ರಕ್ಷಣೆ ಮತ್ತು ಆರೈಕೆ ಅಗತ್ಯವಿರುವ ಮಕ್ಕಳನ್ನು ಹೀಗೆ ವ್ಯಾಖ್ಯಾನಿಸಲಾಗುತ್ತದೆ.

- ಯಾವ ಮಕ್ಕಳಿಗೆ ತಮ್ಮದೇ ಆದ ಮನೆಯಿಲ್ಲವೋ ಅಥವಾ ವ್ಯವಸ್ಥಿತವಾದ ವಾಸಸ್ಥಳವಿಲ್ಲವೋ ಅಥವಾ ಮೇಲು ನೋಟಕ್ಕೆ ಕಂಡುಬರುವಂತೆ ಜೀವನ ನಿರ್ವಹಣೆಗೆ ಸೂಕ್ತ ಮಾರ್ಗವಿಲ್ಲವೋ ಅಂತಹ ಮಕ್ಕಳು; ಅಥವಾ
- ಚಾಲ್ತಿಯಲ್ಲಿರುವ ಕಾರ್ಮಿಕ ಕಾಯಿದೆಗಳಿಗೆ ವಿರುದ್ಧವಾಗಿ ದುಡಿಯುತ್ತಿರುವ ಅಥವಾ ಭಿಕ್ಷೆ ಬೇಡುತ್ತಿರುವ ಅಥವಾ ಬೀದಿಯ ಮೇಲೆ ಬದುಕುತ್ತಿರುವ ಮಗು; ಅಥವಾ
- ಯಾವ ಮಗುವಿಗೆ ತನ್ನ ಪೋಷಕರು ಆಗಿರಬಹುದಾದ ಅಥವಾ ಅಲ್ಲದ ಯಾವುದೇ ವ್ಯಕ್ತಿಯೊಡನೆ ಇರುವಾಗ ಅಂಥಹ ವ್ಯಕ್ತಿಯಿಂದ
- ಯಾವ ಮಗುವಿನ ಮೇಲೆ ಹಲ್ಲೆಯಾಗಿದ್ದು ಗಾಯಗಳಾಗಿವೆಯೋ, ಶೋಷಣೆಗೆ, ದುರುಪಯೋಗಕ್ಕೆ ಒಳಪಟ್ಟಿದೆಯೋ ಅಥವಾ ಮಕ್ಕಳ ರಕ್ಷಣೆಗೆ ಈಗ ಚಾಲ್ತಿಯಲ್ಲಿರುವ ಯಾವುದೇ ಕಾಯಿದೆಯನ್ನು ಉಲ್ಲಂಘಿಸುತ್ತಿದ್ದಲ್ಲಿ; ಅಥವಾ
- ಯಾವ ಮಗುವಿಗೆ ಕೊಲೆ ಬೆದರಿಕೆ ಅಥವಾ ದೈಹಿಕ ಹಲ್ಲೆ/ಗಾಯವಾಗಲಿದೆ ಎಂದು ನಂಬಲರ್ಹವಾದ ಸಾಧ್ಯತೆಗಳು ಇವೆಯೋ ಮತ್ತು ಅಂತಹ ಬೆದರಿಕೆ ಮುಂದುವರಿಯುವ ಸಾಧ್ಯತೆಗಳಿವೆಯೋ; ಅಥವಾ
- ಅಲ್ಲಿರುವ ಇತರ ಮಕ್ಕಳು/ಮಗುವನ್ನು ಕೊಂದಿರುವ, ದುರುಪಯೋಗ, ನಿರ್ಲಕ್ಷ್ಯ ಮಾಡಿರುವ ಪ್ರಕರಣವಿದ್ದು, ಒಂದು ನಿರ್ದಿಷ್ಟ ಮಗು ಅಥವಾ ಮಕ್ಕಳಿಗೆ ಕೊಲೆ/ದುರುಪಯೋಗ ಅಥವಾ ನಿರ್ಲಕ್ಷ್ಯ ಉಂಟಾಗುವ ಸಾಧ್ಯತೆಗಳಿದ್ದಲ್ಲಿ; ಅಥವಾ
- ಮಾನಸಿಕ ಮತ್ತು/ಅಥವಾ ದೈಹಿಕ ಅಂಗವಿಕಲತೆಯಿಂದ ಬಳಲುತ್ತಿರುವ ಅಥವಾ ಅನಾರೋಗ್ಯದಿಂದಿರುವ ಅಥವಾ ಗುಣಪಡಿಸಲಾಗದಂತಹ ಮತ್ತು ಕ್ರಮೇಣ ಪ್ರಾಣಾಂತಕವಾದ ರೋಗದಿಂದ ಬಳಲುತ್ತಿದ್ದು

[1] ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ "ಚುಕ್ಕೆ ಇಲ್ಲದ ಪ್ರಶ್ನೆ ಸಂ: 3193ಗೆ ಉತ್ತರದಲ್ಲಿ ಉಲ್ಲೇಖಿಸಿದ ಅನುಬಂಧ – ಮಕ್ಕಳ ಆರೈಕೆ ಸಂಸ್ಥೆಗಳ ಸ್ಥಿತಿಗತಿ" *ಲೋಕಸಭೆ*, 13 ಡಿಸೆಂಬರ್ 2024, ಭಾರತ ಸರ್ಕಾರ.

[2] https://www.latestlaws.com/bare-acts/central-acts-rules/children-laws/juvenile-justice-care-and-protection-of-children-act2015/

ಯಾರೂ ಸಹ ಅಂತಹ ಮಕ್ಕಳನ್ನು ನೋಡಿಕೊಳ್ಳಲು ಇಲ್ಲವಾಗಿದ್ದಲ್ಲಿ, ಅಥವಾ ಆ ಮಗುವಿನ ಪೋಷಕರು ಅಥವಾ ತಂದೆ ತಾಯಿಯರು ಆ ಮಗುವನ್ನು ನೋಡಿಕೊಳ್ಳಲು ಅರ್ಹರಲ್ಲವೆಂದು ಮಂಡಳಿ, ಅಥವಾ ಸಮಿತಿಯಿಂದ ನಿರ್ಧಾರಿತವಾಗಿದ್ದಲ್ಲಿ; ಅಥವಾ

- ಯಾವ ಮಕ್ಕಳಿಗೆ ಪೋಷಕರು ಅಥವಾ ಪಾಲಕರಿದ್ದೂ, ಅಂತಹ ಪೋಷಕರು/ಪಾಲಕರು ಮಕ್ಕಳನ್ನು ನೋಡಿಕೊಳ್ಳಲು ಪಾಲನೆ, ಪೋಷಣೆ ಮತ್ತು ಸುರಕ್ಷತೆಯನ್ನು ನಡೆಸಲು ಅನರ್ಹರೆಂದು ಸಮಿತಿ ಅಥವಾ ಮಂಡಳಿಯು ನಿರ್ಧರಿಸಿದ್ದಲ್ಲಿ; ಅಥವಾ

- ಯಾವ ಮಗುವಿಗೆ ಪೋಷಕರಿಲ್ಲವೋ ಅಥವಾ ಆ ಮಗುವಿನ ಪಾಲನೆಗೆ ಯಾರೂ ಮುಂದುಬರುವುದಿಲ್ಲವೋ ಅಥವಾ ಯಾವ ಮಗುವನ್ನು ಪೋಷಕರೆ ತ್ಯಜಿಸಿದ್ದಾರೋ ಅಥವಾ ಪರಿತ್ಯಜಿಸಿದ್ದಾರೋ; ಅಥವಾ

- ಸಾಕಷ್ಟು ವಿಚಾರಣೆ, ತಪಾಸಣೆ ಮಾಡಿದ ಮೇಲೂ ಯಾವ ಮಗುವಿನ–ತಪ್ಪಿಹೋಗಿರುವ /ಕಳೆದು ಹೋಗಿರುವ, ಓಡಿ ಬಂದಿರುವ/ಬಿಟ್ಟು ಹೋಗಿರುವ ಪೋಷಕರ ಪತ್ತೆ ಆಗದಿದ್ದಲ್ಲಿ; ಅಥವಾ

- ಯಾವುದೇ ರೀತಿಯ ಕಾನೂನು ಬಾಹಿರ ಅಥವಾ ಲೈಂಗಿಕವಾಗಿ ಮಗುವನ್ನು ಶೋಷಿಸುವ ಅಥವಾ ಅಂತಹ ಕಾನೂನು ವಿರೋಧೀ ಕೃತ್ಯಗಳಿಗೆ ಬಳಸುವ, ಹಿಂಸಿಸುವ ಮತ್ತು ದುರುಪಯೋಗಕ್ಕೆ ಗುರಿಯಾಗುವ ಸಾಧ್ಯತೆಯಿರುವ ಮಕ್ಕಳು; ಅಥವಾ

- ಯಾವ ಮಗು ಮಾದಕ ದ್ರವ್ಯಗಳ ಬಳಕೆಗೆ ಅಥವಾ ಸಾಗಣೆ/ಮಾರಾಟಕ್ಕೆ ತೊಡಗಿಕೊಳ್ಳುವಂತೆ ಮಾಡುವ ಮೂಲಕ ದುರುಪಯೋಗಕ್ಕೆ ಗುರಿಯಾಗುವ ಸಾಧ್ಯತೆ ಇದೆಯೋ; ಅಥವಾ

- ಯಾವ ಮಗು/ಮಕ್ಕಳ ಎಳೆ ವಯಸ್ಸು, ಮನಸ್ಸು, ದೇಹಗಳನ್ನು ದುಡಿಸಿ, ದಣಿಸಿ, ಆರ್ಥಿಕ ಲಾಭಗಳಿಸುವ ಉದ್ದೇಶವನ್ನು ಹೊಂದಿದ್ದಾರೆಂದು ಪರಿಗಣಿತವಾಗಿದೆಯೋ; ಅಥವಾ

- ಯಾವ ಮಗು/ಮಕ್ಕಳು ಸಶಸ್ತ್ರ ಸಂಘರ್ಷಗಳು, ನಾಗರಿಕ ಕ್ಷೋಭೆಗಳು ಅಥವಾ ನೈಸರ್ಗಿಕ ವಿಪತ್ತುಗಳಿಗೆ ಗುರಿಯಾಗಿದೆಯೋ; ಅಥವಾ

- 18 ವರ್ಷ ಪೂರೈಸುವುದರೊಳಗೆ ಮದುವೆಗೆ ಗುರಿಯಾಗುವ ಆತಂಕವಿದ್ದು, ಆ ಮಗುವಿನ ಪೋಷಕರು, ಕುಟುಂಬದ ಸದಸ್ಯರು, ಪಾಲಕರು ಮತ್ತು ಯಾವುದೇ ಇತರ ವ್ಯಕ್ತಿಗಳಿಂದ ಅಂತಹ ಮದುವೆ ಆಗಿ ಬಿಡುವ ಸಾಧ್ಯತೆಯಿದೆಯೋ;

ಈ ರೀತಿಯ ಮಕ್ಕಳಿಗೆ ರಕ್ಷಣೆ ಮತ್ತು ಆರೈಕೆಯನ್ನು ನೀಡಲಾಗುತ್ತದೆ.

**ಸರ್ಕಾರಿ ಬಾಲಮಂದಿರದ ಇತಿಹಾಸ**

ಪ್ರಾಚೀನ ಭಾರತದಲ್ಲಿ ಅನಾಥ ಅಥವಾ ಪರಿತ್ಯಕ್ತ ಮಕ್ಕಳ ರಕ್ಷಣೆ ಮತ್ತು ಆರೈಕೆಯನ್ನು ಅಂದಿನ ಅವಿಭಕ್ತ ಕುಟುಂಬಗಳು, ದೇವಾಲಯಗಳು, ಮಠಗಳು ಮತ್ತು ಧರ್ಮಛತ್ರಗಳು ನೋಡಿಕೊಳ್ಳುತ್ತಿದ್ದವು. ಕುಟುಂಬವಿಲ್ಲದ ಅನಾಥ ಮಕ್ಕಳಿಗೆ ಆಶ್ರಮ, ಗುರುಕುಲ ಮತ್ತು ಮಠಗಳು ಊಟ, ವಾಸ್ತವ್ಯ, ಶಿಕ್ಷಣವನ್ನು ಒದಗಿಸುತ್ತಿತ್ತು. ಇಂದಿನಂತೆ ಸರ್ಕಾರದಿಂದ ನಡೆಯುವ ಔಪಚಾರಿಕ ಸಂಸ್ಥೆಗಳು ಅಂದು ಇರಲಿಲ್ಲ, ಅನೌಪಚಾರಿಕ ಸಮುದಾಯ ಬೆಂಬಲ ವ್ಯವಸ್ಥೆಯಿಂದ ಮಕ್ಕಳು ಆರೈಕೆ ಮತ್ತು ರಕ್ಷಣೆ ಹೊಂದಿದ್ದರು. ಭಾರತಕ್ಕೆ ಯುರೋಪಿಯನ್ನರು ಆಗಮನವಾದಂತೆ ಆಧುನಿಕತೆಯ ಗಾಳಿ ಬೀಸತೊಡಗಿತು. ಬದಲಾದ ಅರ್ಥವ್ಯವಸ್ಥೆ ಅವಿಭಕ್ತ ಕುಟುಂಬವನ್ನು ಕ್ರಮೇಣ

ನಶಿಸುವಂತೆ ಮಾಡಿತು[3]. 1837ರಲ್ಲಿ ಬರಗಾಲದಿಂದ ತಂದೆ–ತಾಯಿಯರನ್ನ ಕಳೆದುಕೊಂಡ ಬಡ ಮತ್ತು ಅನಾಥ ಮಕ್ಕಳ ರಕ್ಷಣೆಗಾಗಿ ಚರ್ಚ್ ಮಿಷನರಿ ಸೊಸೈಟಿ ಆಗ್ರಾದ ಸಿಖಂದರ್‌ನಲ್ಲಿ ದೇಶದಲ್ಲಿಯೇ ಮೊದಲಬಾರಿಗೆ ಅನಾಥಾಲಯವನ್ನು ಸ್ಥಾಪಿಸಿತು. ಸ್ವಾತಂತ್ರ್ಯ ನಂತರದಲ್ಲಿ ಸಂವಿಧಾನ ಜಾರಿಯಾದ ಪ್ರಯುಕ್ತ ಮಕ್ಕಳ ಆರೈಕೆ ಮತ್ತು ರಕ್ಷಣೆ ಸಾಂವಿಧಾನಿಕ ಬದ್ಧತೆಯಾಯಿತು. ಅನಾಥಾಶ್ರಮಗಳು ಮತ್ತು ಇತರೆ ದತ್ತಿ ಮನೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಕಾಯ್ದೆ, 1960 ಜಾರಿಗೆ ಬಂದಿತು. ಇದು ಭಾರತದಾದ್ಯಂತ ಇರುವ ಅನಾಥಾಲಯ ಮತ್ತು ದತ್ತಿ ಮನೆಗಳನ್ನು ನಿಯಂತ್ರಿಸತೊಡಗಿತು. ಮಕ್ಕಳ ಕಾಯ್ದೆ–1960 ಭಾರತದಲ್ಲಿ ಆಧುನಿಕ ಮಕ್ಕಳ ನ್ಯಾಯ ವ್ಯವಸ್ಥೆಗೆ ಬುನಾದಿ ಹಾಕಿದ ಪ್ರಮುಖ ಕಾಯ್ದೆಯಾಗಿದೆ. ಈ ಕಾಯ್ದೆ ಬಾಲಾಪರಾಧಿ ಮಕ್ಕಳು (ನಂತರದಲ್ಲಿ ಕಾನೂನಿನೊಡನೆ ಸಂಘರ್ಷಕ್ಕೊಳಪಟ್ಟ ಮಕ್ಕಳು ಎಂದು ಮಕ್ಕಳನ್ಯಾಯ ಕಾಯ್ದೆ– 2000ರಲ್ಲಿ ಬದಲಿಸಲಾಯಿತು) ಮತ್ತು ನಿರ್ಲಕ್ಷಿತ ಮಕ್ಕಳು ಎಂದು ಎರಡು ವಿಭಾಗವಾಗಿ ವಿಂಗಡಿಸುತ್ತದೆ. ರಾಜ್ಯ ಸರ್ಕಾರಗಳು ಬಾಲಾಪರಾಧಿ ಮಕ್ಕಳಿಗೆ ಪರಿವೀಕ್ಷಣಾ ಗೃಹ ಮತ್ತು ನಿರ್ಲಕ್ಷಿತ ಮಕ್ಕಳ ಆರೈಕೆ ಮತ್ತು ರಕ್ಷಣೆಗೆ ಬಾಲಮಂದಿರಗಳನ್ನು ಸ್ಥಾಪಿಸಲು ಅವಕಾಶ ನೀಡುವುದು. ಆರೈಕೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳಿಗೆ ಸಾಂಸ್ಥಿಕ ಆರೈಕೆ ನೀಡಬೇಕೆಂಬುದನ್ನು ಕಾನೂನು ಮಾನ್ಯ ಮಾಡಿದ ಮೊದಲ ಕಾಯ್ದೆ ಇದಾಗಿದೆ. 1974ರಲ್ಲಿ ರಾಷ್ಟ್ರೀಯ ಮಕ್ಕಳ ನೀತಿ ಜಾರಿಗೆ ಬಂದಿತು, ಮಕ್ಕಳು ರಾಷ್ಟ್ರೀಯ ಆಸ್ತಿ ಎಂದು ಪರಿಗಣಿಸಿತು. ನಿರ್ಗತಿಕ ಮಕ್ಕಳ ರಕ್ಷಣೆ, ಆರೋಗ್ಯ, ಶಿಕ್ಷಣಕ್ಕೆ ವಿಶೇಷ ವ್ಯವಸ್ಥೆ ಮಾಡಬೇಕೆಂದಿತು. ವಿಶ್ವಸಂಸ್ಥೆಯ ಮಾನದಂಡ ಮತ್ತು ಬೀಜಿಂಗ್ ನಿಯಮಗಳನ್ನು ಅನುಸರಿಸಿ ಜಾರಿಯಾದ ಕಾಯ್ದೆಯೆಂದರೆ 1986ರ ಮಕ್ಕಳ ನ್ಯಾಯ ಕಾಯ್ದೆ. ಇದು ರಾಜ್ಯಗಳಲ್ಲಿ ಜಾರಿಯಲ್ಲಿದ್ದ ಹಲವು ಕಾಯ್ದೆಗಳನ್ನು ರದ್ದುಗೊಳಿಸಿ ದೇಶವ್ಯಾಪಿ ಏಕಮಾತ್ರ ಕಾಯ್ದೆ ಜಾರಿ ಮಾಡಿತು. 1989ರ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಘೋಷಣೆಯ ಅಂಶಗಳನ್ನು ಒಳಗೊಂಡ ಸಮಗ್ರ ಕಾಯ್ದೆಯೇ ಮಕ್ಕಳ ನ್ಯಾಯ (ಆರೈಕೆ ಮತ್ತು ರಕ್ಷಣೆ)ಕಾಯ್ದೆ – 2000, ಇದರಲ್ಲಿ ಮಕ್ಕಳ ಕಲ್ಯಾಣ ಸಮಿತಿ ಮತ್ತು ಬಾಲನ್ಯಾಯ ಮಂಡಳಿಯನ್ನು ಪರಿಚಯಿಸಲಾಯಿತು. ಬಾಲಮಂದಿರದ ಆರೈಕೆಯನ್ನು ಹಕ್ಕು ಆಧಾರಿತವನ್ನಾಗಿಸಿ, ಪುನರ್ವಸತಿ ವ್ಯವಸ್ಥೆಗೆ ಒತ್ತು ನೀಡಿತು. ನಿರ್ಲಕ್ಷಿತ ಮಕ್ಕಳನ್ನು ಆರೈಕೆ ಮತ್ತು ರಕ್ಷಣೆ ಅಗತ್ಯವುಳ್ಳ ಮಕ್ಕಳೆಂದು ಪ್ರಥಮ ಬಾರಿಗೆ ಕಾನೂನಾತ್ಮಕವಾಗಿ ಸಂಬೋಧಿಸಿತು. ನಂತರ ಬಂದ ಮಕ್ಕಳ ನ್ಯಾಯ (ಆರೈಕೆ ಮತ್ತು ರಕ್ಷಣೆ) ಕಾಯ್ದೆ – 2015 ದೀರ್ಘವಾಧಿಯ ಬಾಲಮಂದಿರದ ಆರೈಕೆಯ ಬದಲಾಗಿ ಕುಟುಂಬ ಆಧಾರಿತ ಮತ್ತು ಸಮುದಾಯ ಪುನರ್ವಸತಿ ವ್ಯವಸ್ಥೆಗೆ ಒತ್ತು ನೀಡಿತು.

**ಕರ್ನಾಟಕದಲ್ಲಿ ಸರ್ಕಾರಿ ಬಾಲಮಂದಿರಗಳು**

2022ರ ಮಕ್ಕಳ ನಿರ್ದೇಶನಾಲಯದ ದತ್ತಾಂಶದ ಪ್ರಕಾರ ಕರ್ನಾಟಕದಲ್ಲಿ 60ಕ್ಕೂ ಹೆಚ್ಚು ಬಾಲಮಂದಿರಗಳಿವೆ. 6 ರಿಂದ 18 ವಯಸ್ಸಿನ ಮಕ್ಕಳನ್ನು ಇರಿಸುವ 55 ಬಾಲಮಂದಿರಗಳಿವೆ. ಅದರಲ್ಲಿ 26 ಬಾಲಕರ ಮತ್ತು 27 ಬಾಲಕಿಯರ ಬಾಲಮಂದಿರಗಳಿವೆ. ಬೆಂಗಳೂರು ಮತ್ತು ಬಳ್ಳಾರಿಯಲ್ಲಿ ಬುದ್ಧಿಮಾಂದ್ಯ ಬಾಲಕರ ಎರಡು ಮತ್ತು ಧಾರವಾಡದಲ್ಲಿ ಬುದ್ಧಿಮಾಂದ್ಯ ಬಾಲಕಿಯರ ಒಂದು ಬಾಲಮಂದಿರವಿದೆ. ಬೆಂಗಳೂರಿನಲ್ಲಿ 0–6 ರ ವಯೋಮಾನದ ಮಕ್ಕಳಿಗೆ ಒಂದು ಶಿಶುಮಂದಿರವಿದೆ. ಕೋಷ್ಟಕ–1 ರಲ್ಲಿ ಸರ್ಕಾರಿ ಬಾಲಮಂದಿರಗಳಲ್ಲಿ ರಕ್ಷಣೆ ಮತ್ತು ಆರೈಕೆಯಲ್ಲಿರುವ ಮಕ್ಕಳ ಸಂಖ್ಯೆಯನ್ನು ಜಿಲ್ಲಾವಾರು ನೀಡಲಾಗಿದೆ. ಬೆಂಗಳೂರು, ಬೆಳಗಾವಿ, ಧಾರವಾಢ ಮತ್ತು

[3] ಬಾಲ್ ರಾಮ್ ಸಿಂಗ್, ಇಂಡಿಯನ್ ಫ್ಯಾಮಿಲಿ ಸಿಸ್ಟಮ್: ದಿ ಕಾನ್ಸೆಪ್ಟ್, ಪ್ರಾಕ್ಟಿಸಸ್ ಅಂಡ್ ಕರಂಟ್ ರಿಲೆವೆನ್ಸ್ (ನವದೆಹಲಿ: ಡಿ.ಕೆ. ಪ್ರಿಂಟ್‌ವರ್ಡ್ ಪ್ರೈ. ಲಿ., 2011), ಪು. 77

ವಿಜಯಪುರ ಜಿಲ್ಲೆಗಳಲ್ಲಿ ನೂರಕ್ಕೂ ಹೆಚ್ಚು ಮಕ್ಕಳು ಆಶ್ರಯದಲ್ಲಿದ್ದಾರೆ.

**ಕೋಷ್ಟಕ: 1 ಕರ್ನಾಟಕ ರಾಜ್ಯದ ಜಿಲ್ಲಾವಾರು ಸರ್ಕಾರಿ ಬಾಲಮಂದಿರಗಳಲ್ಲಿರುವ ಮಕ್ಕಳ ಸಂಖ್ಯೆ**

| ಕ್ರಮ ಸಂಖ್ಯೆ | ಜಿಲ್ಲೆಗಳು | ಬಾಲಕರ ಬಾಲಮಂದಿರ | ಬಾಲಕಿಯರ ಬಾಲಮಂದಿರ | ಒಟ್ಟು |
|---|---|---|---|---|
| 1. | ಬಾಗಲಕೋಟೆ | 37 | 62 | 99 |
| 2. | ಬಳ್ಳಾರಿ | 21 | 23+43 | 87 |
| 3. | ಬೆಳಗಾವಿ | 54 | 49 | 103 |
| 4. | ಬೆಂಗಳೂರು ನಗರ | 75 | 52+63+15 | 205 |
| 5. | ಬೀದರ್ | 50 | 64 | 114 |
| 6. | ಚಾಮರಾಜನಗರ | 09 | 12 | 21 |
| 7. | ಚಿಕ್ಕಬಳ್ಳಾಪುರ | – | 26 | 26 |
| 8. | ಚಿಕ್ಕಮಗಳೂರು | 25 | 15 | 40 |
| 9. | ಚಿತ್ರದುರ್ಗ | 39 | 44 | 83 |
| 10. | ದಕ್ಷಿಣ ಕನ್ನಡ | 39 | – | 39 |
| 11. | ದಾವಣಗೆರೆ | 34 | 63 | 97 |
| 12. | ಧಾರವಾಢ | 71 | 66+43 | 180 |
| 13. | ಗದಗ | 28 | 58 | 86 |
| 14. | ಹಾಸನ | 40 | 47 | 87 |
| 15. | ಹಾವೇರಿ | 36 | 28 | 64 |
| 16. | ಕಲ್ಬುರ್ಗಿ | 16 | 46+36 | 98 |
| 17. | ಕೊಡಗು | 18 | 39 | 57 |
| 18. | ಕೋಲಾರ | 11 | 27 | 38 |
| 19. | ಕೊಪ್ಪಳ | 28 | 24 | 52 |
| 20. | ಮಂಡ್ಯ | 29 | 22 | 51 |
| 21. | ಮೈಸೂರು | 26 | 57 | 83 |
| 22. | ರಾಯಚೂರು | 22 | 24 | 46 |
| 23. | ರಾಮನಗರ | 23 | – | 23 |
| 24. | ಶಿವಮೊಗ್ಗ | 37 | 44 | 81 |
| 25. | ತುಮಕೂರು | 18 | 37 | 55 |
| 26. | ಉಡುಪಿ | – | 33 | 33 |
| 27. | ಉತ್ತರ ಕನ್ನಡ | 28 | 33 | 61 |
| 28. | ವಿಜಯಪುರ | 80 | 71 | 151 |
| 29. | ಯಾದಗಿರಿ | – | 45 | 45 |
| | ಒಟ್ಟು | 894 | 1311 | 2205 |

**ಮೂಲ:** ಮಕ್ಕಳ ರಕ್ಷಣಾ ನಿರ್ದೇಶನಾಲಯ, ಕರ್ನಾಟಕ ಸರ್ಕಾರ – 2022

**ಬಾಲಮಂದಿರಗಳಲ್ಲಿರುವ ಆರೈಕೆ ಮತ್ತು ರಕ್ಷಣೆಗೆ ಒಳಪಡುವ ಮಕ್ಕಳಿಗೆ ನೀಡಲಾಗುವ ಸವಲತ್ತುಗಳು**

ಸರ್ಕಾರಿ ಬಾಲಮಂದಿರಗಳಲ್ಲಿ ಮಾದರಿಯಾಗಿ ಅಗತ್ಯವಾಗಿ ಇರಲೇಬೇಕಾದ ವಿವಿಧ ಸವಲತ್ತುಗಳ ಕುರಿತಾಗಿ ಮಕ್ಕಳ ನ್ಯಾಯ (ಆರೈಕೆ ಮತ್ತು ರಕ್ಷಣೆ) ಕಾಯ್ದೆ – 2015 ಮತ್ತು ಮಕ್ಕಳ ನ್ಯಾಯ (ಆರೈಕೆ ಮತ್ತು ರಕ್ಷಣೆ) ಮಾದರಿ ನಿಯಮಗಳು – 2016 ಕಾನೂನುಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದ್ದು, ಸರ್ಕಾರಿ ಬಾಲಮಂದಿರವೊಂದು ಹೊಂದಿರಬೇಕಾದ ಪ್ರಮಾಣೀಕೃತ ಸವಲತ್ತುಗಳ ವಿವರವನ್ನು ಸಂಕ್ಷಿಪ್ತವಾಗಿ ಈ ಮುಂದೆ ನೀಡಲಾಗಿದೆ.

**ಸರ್ಕಾರಿ ಬಾಲಮಂದಿರದ ನಿರ್ವಹಣೆ ಮತ್ತು ಮೂಲಭೂತ ಸೌಕರ್ಯಗಳು**

ಹತ್ತು ವರ್ಷ ಒಳಪಟ್ಟ ಗಂಡು ಮತ್ತು ಹೆಣ್ಣು ಮಕ್ಕಳನ್ನು ಒಂದೇ ಬಾಲಮಂದಿರದಲ್ಲಿರಿಸಬಹುದು. ಆದರೆ ಆ ಬಾಲಮಂದಿರದಲ್ಲಿ ಐದರಿಂದ ಹತ್ತು ವರ್ಷದ ಮಕ್ಕಳಿಗೆ ಸ್ನಾನ ಮತ್ತು ಮಲಗುವ ವ್ಯವಸ್ಥೆ ಬೇರೆ ಇರಬೇಕು. ಕಡ್ಡಾಯವಾಗಿ ಏಳರಿಂದ ಹನ್ನೊಂದು ವರ್ಷ ಮತ್ತು ಹನ್ನೆರಡರಿಂದ ಹದಿನೆಂಟು ವರ್ಷದ ಗಂಡು ಮತ್ತು ಹೆಣ್ಣು ಮಕ್ಕಳ ಪ್ರತ್ಯೇಕ ಬಾಲಮಂದಿರವಿರಬೇಕು. ಆರು ವರ್ಷದ ಒಳಗಿನ ಮಕ್ಕಳಿಗೆ ಪ್ರತ್ಯೇಕ ಶಿಶುಮಂದಿರವಿರಬೇಕು. ಬಾಲಮಂದಿರಗಳು ಮಕ್ಕಳ ಸ್ನೇಹಿಯಾಗಿರಬೇಕು ಜೈಲಿನಂತೆ ಅಥವಾ ಲಾಕ್–ಆಪ್ ರೀತಿ ಇರಬಾರದು. ಪ್ರತಿ ಬಾಲಮಂದಿರವು ಮಕ್ಕಳನ್ನು ನೋಡಿಕೊಳ್ಳಲು ನಿರ್ವಹಣಾ ಸಮಿತಿ ಹೊಂದಿರಬೇಕು. ಆ ನಿರ್ವಹಣಾ ಸಮಿತಿಯು ಪ್ರತಿ ಮಕ್ಕಳ ಪ್ರಗತಿಯತ್ತ ಗಮನಹರಿಸಬೇಕು. ಕಾನೂನಿನ ಸಂಘರ್ಷದಲ್ಲಿರುವ ಮಕ್ಕಳು ಮತ್ತು ಆರೈಕೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳನ್ನು ಪ್ರತ್ಯೇಕವಿರಿಸಬೇಕು.

ಬಾಲಮಂದಿರದ ಪ್ರಭಾರ ವಹಿಸುವ ಅಧಿಕಾರಿ ಅಥವಾ ಅಧೀಕ್ಷಕರು ಬಾಲಮಂದಿರದಲ್ಲಿಯೇ ವಾಸವಿರಬೇಕು. ಸೂಕ್ತ ಕಾರಣಗಳಿಂದ ಅವರು ಬಾಲಮಂದಿರದಲ್ಲಿ ಉಳಿಯಲು ಸಾಧ್ಯವಾಗದಿದ್ದರೆ, ಸಂಸ್ಥೆಯ ಯಾವುದೇ ಇತರ ಹಿರಿಯ ಸಿಬ್ಬಂದಿ ಬಾಲಮಂದಿರದಲ್ಲಿಯೇ ಉಳಿಯಬೇಕು. ಬಾಲಮಂದಿರದಲ್ಲಿ ಮಕ್ಕಳು ಓಡಾಡುವಾಗ ಜಾರದಂತಹ ನೆಲಹಾಸು ಹೊಂದಿರಬೇಕು. ಸಾಕಷ್ಟು ಗಾಳಿ–ಬೆಳಕು ಇರುವ ತಣ್ಣನೆಯ ಹಾಗೂ ಬೆಚ್ಚಗಿರಿಸುವ, ಗಾಳಿಯಾಡುವ ವಸತಿ ವ್ಯವಸ್ಥೆಯಿರಬೇಕು. ಶುದ್ಧ ಕುಡಿಯುವ ನೀರಿನ ವ್ಯವಸ್ಥೆ. ಸ್ವಚ್ಛತೆಯಿಂದ ಕೂಡಿದ ಲಿಂಗ ಮತ್ತು ವಯೋಮಾನವಾರು ಬಳಸಬಹುದಾದ ಹಾಗೂ ಅಂಗವಿಕಲ ಮಕ್ಕಳ ಸ್ನೇಹಿ ಶೌಚಾಲಯ ಹೊಂದಿರಬೇಕು. ತಂತಿಬೇಲಿಯುಕ್ತ ಎತ್ತರದ ಗೋಡೆ ಹೊಂದಿರಬೇಕು. ಆಹಾರ ಪದಾರ್ಥಗಳ ಸರಿಯಾದ ಸಂಗ್ರಹಣಾ ವ್ಯವಸ್ಥೆ, ನೀರಿನ ಸಂಗ್ರಹ, ತುರ್ತು ಬೆಳಕಿನ ವ್ಯವಸ್ಥೆ. ಅಂಗವಿಕಲ ಮಕ್ಕಳಿಗಾಗಿ ಅಂಗವಿಕಲ ಸಹಾಯಕ ಸಾಧನಗಳನ್ನು ತಜ್ಞರ ಸಲಹೆಯಂತೆ ಒದಗಿಸುವುದು. ಕಂಪ್ಯೂಟರ್, ಜೆರಾಕ್ಸ್, ಪ್ರಿಂಟರ್, ಸ್ಕ್ಯಾನರ್, ಟೆಲಿಫೋನ್, ಅಂತರ್ಜಾಲ ಸಂಪರ್ಕ, ವೆಬ್‌ಕ್ಯಾಮ್, ಪ್ರೊಜೆಕ್ಟರ್, ಅಧಿಕಾರಿಗಳಿಗೆ ದಾಖಲೆ ಸಂಗ್ರಹಿಸಲು ಕಪಾಟು, ವೈದ್ಯಕೀಯ ಕೊಠಡಿಗೆ ವ್ಹೀಲ್ ಚೇರ್–ಸ್ಟ್ರೇಚರ್ ಸೌಲಭ್ಯ ಇರಬೇಕು. ಅಧ್ಯಯನ ಕೊಠಡಿ ಮತ್ತು ಊಟದ ಸಭಾಂಗಣ ಕುರ್ಚಿ ಮತ್ತು ಮೇಜನ್ನು ಹೊಂದಿರಬೇಕು. ಐವತ್ತು ಮಕ್ಕಳಿರುವ ಒಂದು ಬಾಲಮಂದಿರದಲ್ಲಿ ಕೋಷ್ಟಕ–2 ರಲ್ಲಿ ಇರುವಂತಹ ಮಾರ್ಗಸೂಚಿಯನ್ವಯ ಕಟ್ಟಡ ಸೌಲಭ್ಯ ಹೊಂದಿರಬೇಕು.

**ಬಟ್ಟೆ, ಹಾಸಿಗೆ, ಶೌಚಾಲಯಗಳು ಮತ್ತು ಇತರ ವಸ್ತುಗಳು**

ಮಕ್ಕಳಿಗೆ ಬಟ್ಟೆ ಮತ್ತು ಹಾಸಿಗೆಯನ್ನು ಹವಾಮಾನ ಪರಿಸ್ಥಿತಿಗೆ ಅನುಗುಣವಾಗಿ ಸಾಕಷ್ಟು ಪ್ರಮಾಣದಲ್ಲಿ ವಿತರಿಸಬೇಕು. ಆದಾಗ್ಯೂ ಬಾಲಮಂದಿರವನ್ನು ಪ್ರವೇಶ ಪಡೆಯುವಾಗ ಒಂದು ಹಾಸಿಗೆ, ಕಾಟನ್ ಬೆಡ್‌ಶೀಟ್, ಕಾಟನ್ ಕಾರ್ಪೆಟ್, ಕಾಟನ್ ದಿಂಬು, ದಿಂಬಿನ ಹೊದಿಕೆ, ಕಾಟನ್

ಕಂಬಳಿ, ಹತ್ತಿ ತುಂಬಿದ ಹೊದಿಕೆ, ಸೊಳ್ಳೆ ಪರದೆ, ಕಾಟನ್ ಟವೆಲ್‌ಗಳನ್ನು ಎಲ್ಲಾ ಮಕ್ಕಳಿಗೆ ನೀಡಬೇಕು. ಹೆಣ್ಣು ಮಕ್ಕಳಿಗೆ ಬ್ಲೌಸ್ ಅಥವಾ ಸಲ್ವಾರ್ ಕಮೀಜ್, ಪೆಟಿಕೋಟ್, ಸ್ಕರ್ಟ್, ವಯಸ್ಸಿಗನುಗುಣವಾದ ಒಳಉಡುಪುಗಳು, ಸ್ಯಾನಿಟರಿ ಪ್ಯಾಡ್, ಉಣ್ಣೆಯ ಸ್ವೆಟರ್‌ಗಳು, ಉಣ್ಣೆಯ ಶಾಲು, ರಾತ್ರಿ ಉಡುಪು ನೀಡಬೇಕು. ಗಂಡು ಮಕ್ಕಳಿಗೆ ಅಂಗಿಗಳು, ಚಡ್ಡಿಗಳು, ಪ್ಯಾಂಟ್‌ಗಳು, ವಯಸ್ಸಿಗನುಗುಣವಾದ ಒಳಉಡುಪುಗಳು, ಉಣ್ಣೆಯ ಜರ್ಸಿಗಳು, ಉಣ್ಣೆಯ ಟೋಪಿ, ರಾತ್ರಿ ಬಳಕೆಗೆ ಕುರ್ತಾ–ಪೈಜಾಮ. ಚಪ್ಪಲಿ, ಆಟದ ಶೂಗಳು, ಶಾಲಾ ಸಮವಸ್ತ್ರ, ಶಾಲೆಯ ಚೀಲ, ಶಾಲೆಯ ಶೂ, ಕರವಸ್ತ್ರ, ಸಾಕ್ಸ್, ಲೇಖನ ಸಾಮಗ್ರಿಗಳು ಮೊದಲಾದವುಗಳನ್ನು ಕಾಲ–ಕಾಲಕ್ಕೆ ಒದಗಿಸಬೇಕು. ಬಾಲಮಂದಿರದ ಮಕ್ಕಳನ್ನು ಒಳರೋಗಿಗಳನ್ನಾಗಿ ಹೊಂದುವ ಯಾವುದೇ ಆಸ್ಪತ್ರೆಯಲ್ಲಿಯು ಕೂಡ ಹಾಸಿಗೆ, ಕಾಟನ್ ಹೊದಿಕೆ, ದಿಂಬು, ಉಣ್ಣೆಯ ಹೊದಿಕೆ, ಹುಡುಗನಿಗೆ ಆಸ್ಪತ್ರೆಯಲ್ಲಿ ಧರಿಸುವ ಸಡಿಲವಾದ ಅಂಗಿ ಮತ್ತು ಪೈಜಾಮಗಳು, ಆಸ್ಪತ್ರೆ ಬಟ್ಟೆಯನ್ನು ಪ್ರತ್ಯೇಕವಾಗಿ ಒಗೆಯುವ ವ್ಯವಸ್ಥೆ ಇರಬೇಕು. ಹುಡುಗಿಗೆ ಬ್ಲೌಸ್ ಅಥವಾ ಸಲ್ವಾರ್ ಕಮೀಜ್, ಪೆಟಿಕೋಟ್ ನೀಡಬೇಕು. ಕೂದಲಿಗೆ ಎಣ್ಣೆ, ಟಾಯ್ಲೆಟ್ ಸೋಪು/ಹ್ಯಾಂಡ್‌ವಾಶ್ ಜೆಲ್, ಹಲ್ಲುಜ್ಜುವ ಬ್ರಶ್–ಪೇಸ್ಟ್, ಬಾಚಣಿಗೆ, ಶ್ಯಾಂಪು, ಸ್ನಾನದ ಸೋಪು, ಕೂದಲಿನ ಕ್ಲಿಪ್ಪು/ಬ್ಯಾಂಡ್, ಚಳಿಗಾಲದಲ್ಲಿ ಕೋಲ್ಡ್ ಕ್ರೀಮ್. ಬಾಲಮಂದಿರದ ಆರೋಗ್ಯ ಮತ್ತು ನೈರ್ಮಲ್ಯ ಕಾಪಾಡಲು ಕಸ ಪೊರಕೆ, ಕೀಟನಾಶಕ ಸಿಂಪಡಣೆ ಮಾಡಬೇಕು, ಸೊಳ್ಳೆಯನ್ನು ನಿವಾರಿಸುವ ಯಂತ್ರಗಳು, ಫಿನಾಯಿಲ್ ಮತ್ತು ಆಸಿಡ್‌ಗಳನ್ನು ಒದಗಿಸಬೇಕು.

**ಕೋಷ್ಟಕ: 2 ವಸತಿ ಮತ್ತು ಕಟ್ಟಡ ಸೌಕರ್ಯ**

| ಕ್ರಮ ಸಂಖ್ಯೆ | ಸೌಲಭ್ಯ | ಜಾಗದ ವಿಸ್ತೀರ್ಣ (ಚದರ ಅಡಿಗಳಲ್ಲಿ) |
|---|---|---|
| 1. | 2 ವಸತಿಗೃಹಗಳು | 2000 (ಪ್ರತಿ25 ಮಕ್ಕಳ ಪ್ರತಿಯೊಂದು ಕೊಠಡಿಗೆ 1000 ಚ.ಅಡಿ) |
| 2. | 2 ತರಗತಿ ಕೊಠಡಿಗಳು | 600 (ಪ್ರತಿ25 ಮಕ್ಕಳ ಪ್ರತಿಯೊಂದು ತರಗತಿ ಕೊಠಡಿಗೆ 300 ಚ.ಅಡಿ) |
| 3. | ಅನಾರೋಗ್ಯ ಕೊಠಡಿ/ಪ್ರಥಮ ಚಿಕಿತ್ಸಾ ಕೊಠಡಿ | 750 (ಪ್ರತಿ 10 ಮಕ್ಕಳಿಗೆ 75 ಚ.ಅಡಿ) |
| 4. | ಅಡುಗೆ ಮನೆ | 250 |
| 5. | ಊಟದ ಸಭಾಂಗಣ | 800 |
| 6. | ಉಗ್ರಾಣ | 250 |
| 7. | ಮನರಂಜನಾ ಕೊಠಡಿ | 300 |
| 8. | ಗ್ರಂಥಾಲಯ | 500 |
| 9. | 5 ಸ್ನಾನದ ಕೊಠಡಿಗಳು | 125 (ಪ್ರತಿ 25 ಚ.ಅಡಿಗೆ ಒಂದರಂತೆ) |
| 10. | 8 ಶೌಚಾಲಯಗಳು | 200 (ಪ್ರತಿ 25 ಚ.ಅಡಿಗೆ ಒಂದರಂತೆ) |
| 11. | ಕಚೇರಿ ಕೊಠಡಿಗಳು | (500) |
| | (i) ಸಾಮಾನ್ಯ ಕಚೇರಿ | 300 |
| | (ii) ಪ್ರಭಾರಿಯ ಕೊಠಡಿ | 200 |
| 12. | ಸಮಾಲೋಚನೆ ಮತ್ತು ಮಾರ್ಗದರ್ಶನ ಕೊಠಡಿ | 120 |
| 13. | ಕಾರ್ಯಾಗಾರ | 1125 |
| 14. | ಉಸ್ತುವಾರಿ ವ್ಯಕ್ತಿಯ ನಿವಾಸ | (625) |

| | | |
|---|---|---|
| | (i) 2 ಕೊಠಡಿಗಳು | 500 |
| | (ii) ಅಡುಗೆಮನೆ | 75 |
| | (iii) ಸ್ನಾನಗೃಹ ಮತ್ತು ಶೌಚಾಲಯ | 50 |
| 15. | ಬಾಲ ನ್ಯಾಯ ಮಂಡಳಿ ಅಥವಾ ಮಕ್ಕಳ ಕಲ್ಯಾಣ ಸಮಿತಿಗಾಗಿ 2 ಕೊಠಡಿಗಳು | 600 |
| 16. | ಆಟದ ಮೈದಾನ | ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಸಾಕಷ್ಟು ಜಾಗ |
| 17. | ಒಟ್ಟು | 8495 ಚದರ ಅಡಿ |

**ವೈದ್ಯಕೀಯ ಆರೈಕೆ:**

ಎಲ್ಲಾ ಬಾಲಮಂದಿರಗಳಲ್ಲಿಯೂ ನಿಯಮಿತ ಅವಧಿಯ ವೈದ್ಯಕೀಯ ತಪಾಸಣೆ ಮತ್ತು ಚಿಕಿತ್ಸೆಗೆ ಅಗತ್ಯ ಬಿದ್ದಾಗಲೆಲ್ಲಾ ವೈದ್ಯಾಧಿಕಾರಿ ಲಭ್ಯವಿರಬೇಕು. ದಿನದ 24 ನಾಲ್ಕು ಗಂಟೆಯು ಬಾಲಮಂದಿರದಲ್ಲಿ ನರ್ಸ್ ಲಭ್ಯವಿರಬೇಕು. ಮಗು ಸರ್ಕಾರಿ ಬಾಲಮಂದಿರದ ಪ್ರವೇಶ ಪಡೆದ 24ಗಂಟೆಯೊಳಗೆ ಮತ್ತು ಬೇರೆಡೆ ವರ್ಗಾವಣೆಯಾಗುವ 24ಗಂಟೆಯ ಮೊದಲು ವೈದ್ಯಕೀಯ ತಪಾಸಣೆ ಮಾಡಬೇಕು. ಪ್ರತಿ ಮಗುವಿಗೆ ಮಾಸಿಕ ವೈದ್ಯಕೀಯ ತಪಾಸಣೆ ಮಾಡಿ ಮಗುವಿನ ಎತ್ತರ–ತೂಕ, ಕಾಯಿಲೆ ಮತ್ತು ನೀಡಲಾದ ವೈದ್ಯಕೀಯ ಸೌಕರ್ಯದ ಕುರಿತು ದಾಖಲೆ ನಿರ್ವಹಿಸಬೇಕು. ಪ್ರತಿ ಮೂರು ತಿಂಗಳಿಗೊಮ್ಮೆ ಹಲ್ಲು, ಕಣ್ಣು ಮತ್ತು ಚರ್ಮ ಕಾಯಿಲೆಯ ಪರೀಕ್ಷೆಗಳನ್ನು ಮಾಡಬೇಕು. ಮಕ್ಕಳಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿಸುವ ಅಗತ್ಯಕ್ರಮ ಕೈಗೊಳ್ಳಬೇಕು. ಅನಾರೋಗ್ಯದಲ್ಲಿರುವ ಮಕ್ಕಳನ್ನು ನಿರಂತರ ವೈದ್ಯಕೀಯ ಮೇಲ್ವಿಚಾರಣೆ ಮಾಡಬೇಕು. ತಂದೆ–ತಾಯಿ ಅಥವಾ ಪೋಷಕರ ಪೂರ್ವಾನುಮತಿ ಇಲ್ಲದೆ ಮಗುವಿಗೆ ಶಸ್ತ್ರಚಿಕಿತ್ಸೆ ಮಾಡುವಂತಿಲ್ಲ. ತಂದೆ–ತಾಯಿ ಅಥವಾ ಪೋಷಕರ ಲಭ್ಯವಿಲ್ಲದೆ, ಮಗುವಿನ ಜೀವಕ್ಕೆ ಅಪಾಯವಿದ್ದ ಸಂದರ್ಭದಲ್ಲಿ ಮಾತ್ರ, ಬಾಲಮಂದಿರದ ಉಸ್ತುವಾರಿ ಅಧಿಕಾರಿ ಒಪ್ಪಿಗೆ ಪತ್ರಕ್ಕೆ ಸಹಿ ಹಾಕಿ ಶಸ್ತ್ರಚಿಕಿತ್ಸೆ ಮಾಡಿಸಬಹುದು. ಪ್ರತಿ ಮಗುವಿಗೂ ನಿಯಮಿತ ಮಾನಸಿಕ ಸಮಾಲೋಚನೆ ಒದಗಿಸಬೇಕು. ಯಾವ ಮಗುವಿಗೆ ಹೆಚ್ಚಿನ ಮಾನಸಿಕ ಆರೋಗ್ಯ ಬೆಂಬಲದ ಅಗತ್ಯವಿದೆಯೋ ಅ ಮಗುವಿಗೆ ಪ್ರತ್ಯೇಕ ಸಮಾಲೋಚನಾ ಕೊಠಡಿಯಲ್ಲಿ ವಿಶೇಷ ಆರೈಕೆ ಒದಗಿಸಬೇಕು. ಅಗತ್ಯಬಿದ್ದಲ್ಲಿ ಹೆಚ್ಚಿನ ನೆರವಿಗೆ ವಿಶೇಷ ಸಮಾಲೋಚನೆ ಕೇಂದ್ರಗಳಿಗೆ ಕಳುಹಿಸಕೊಡತಕ್ಕದ್ದು. ಮಾದಕವ್ಯಸನಕ್ಕೊಳಗಾದ ಮಕ್ಕಳನ್ನು ಪುನರ್ವಸತಿ ಕೇಂದ್ರಗಳಿಗೆ ಕಳುಹಿಸತಕ್ಕದ್ದು, ಲೈಂಗಿಕ ದೌರ್ಜನ್ಯಕ್ಕೊಳಗಾದ ಮಕ್ಕಳಿಗೆ ಮಕ್ಕಳ ಕಲ್ಯಾಣ ಸಮಿತಿಯ ಆದೇಶದನುಸಾರ ಗರ್ಭಾಧಾರಣೆಯ ಪರೀಕ್ಷೆಗೆ ಒಳಪಡಿಸುವುದು. ದೈಹಿಕ ಮತ್ತು ಮಾನಸಿಕ ಸಮಸ್ಯೆಯನ್ನು ಎದುರಿಸುತ್ತಿರುವ ಮಕ್ಕಳನ್ನು ವಿಶೇಷ ಮಕ್ಕಳ ಗೃಹಗಳಿಗೆ ಕಳುಹಿಸಕೊಡತಕ್ಕದ್ದು. ಋತುಮತಿಯರಾದ ಹೆಣ್ಣು ಮಕ್ಕಳಿಗೆ ಕಬ್ಬಿಣಾಂಶದ ಕೊರತೆಯ ತಪಾಸಣೆ ಮಾಡಿ, ಅಗತ್ಯವಿದ್ದಲ್ಲಿ ಪೌಷ್ಟಿಕತಜ್ಞರಿಂದ ಆಹಾರ ಯೋಜನೆ ಸಿದ್ಧಪಡಿಸಿಕೊಡುವುದು.

**ಮಾನಸಿಕ ಆರೋಗ್ಯ**

ಮಕ್ಕಳು ತಮ್ಮ ಸಮಸ್ಯೆಗಳಿಂದ ಹೊರಬಂದು ಆತ್ಮವಿಶ್ವಾಸವನ್ನು ಮರಳಿಪಡೆದುಕೊಳ್ಳಲು ಪೂರಕವಾದ ದೌರ್ಜನ್ಯಮುಕ್ತವಾದ, ಸಾವಯವ ವಾತಾವರಣವನ್ನು ಸರ್ಕಾರಿ ಬಾಲಮಂದಿರವು ಹೊಂದಿರಬೇಕು. ಮಕ್ಕಳ ಆರೈಕೆ ಮಾಡುವ ಎಲ್ಲಾ ವ್ಯಕ್ತಿಗಳು ಸಾಕಾರಾತ್ಮಕ ವಾತಾವರಣ ನಿರ್ಮಿಸಿ

ಮಕ್ಕಳಿಗೆ ಬೆಂಬಲವಾಗಿ ನಿಲ್ಲಬೇಕು. ಪ್ರತಿ ಮಗುವಿನಲ್ಲಿ ಸಕಾರಾತ್ಮಕ ವರ್ತನೆಯ ಬದಲಾವಣೆ ತರಲು ಸಮುದಾಯ ಆಧಾರಿತ ಮಧ್ಯಸ್ಥಿಕೆ ಚಿಕಿತ್ಸೆ ಮತ್ತು ವೈಯಕ್ತಿಕ ಚಿಕಿತ್ಸೆಯನ್ನು ನೀಡಬೇಕು. ವೈಯಕ್ತಿಕ ಮತ್ತು ವಿಶೇಷ ಮಾನಸಿಕ ಚಿಕಿತ್ಸೆಗಾಗಿ ತರಬೇತಿ ಪಡೆದ ಮಾನಸಿಕ ಸಮಲೋಚಕರ ಸೇವೆಯನ್ನು ಒದಗಿಸಬೇಕು. ಈ ಸೇವೆಯನ್ನು ಯಾವುದೇ ಸರ್ಕಾರಿ/ಸರ್ಕಾರೇತರ ಮಕ್ಕಳ ಮಾನಸಿಕ ಸಮಾಲೋಚನ ಕೇಂದ್ರ, ಮನೋವಿಜ್ಞಾನ, ಮನೋವೈಜ್ಞಾನಿಕ ವಿಭಾಗಗಳೊಂದಿಗೆ ಬಾಹ್ಯ ಸಹಯೋಗವನ್ನು ಮಾಡಿಕೊಳ್ಳುವುದರೊಂದಿಗೆ ಒದಗಿಸಬಹುದು. ತಜ್ಞ ವೈದ್ಯರಿಂದ ಮಾನಸಿಕ ರೋಗ ಪತ್ತೆಹಚ್ಚಿ, ಔಷಧವನ್ನು ಸೂಚಿಸದ ಹೊರತು ಮಕ್ಕಳಿಗೆ ಔಷಧಿ ನೀಡುವಂತಿಲ್ಲ. ತರಬೇತಿ ಪಡೆದ ವೈದ್ಯಕೀಯ ಸಿಬ್ಬಂದಿ ಮಾತ್ರ ಮಕ್ಕಳಿಗೆ ಔಷದೋಪಚಾರ ಮಾಡಬೇಕು.

**ಶಿಕ್ಷಣ**

ಪ್ರತಿಯೊಂದು ಬಾಲಮಂದಿರವು ಮಕ್ಕಳ ವಯಸ್ಸು ಮತ್ತು ಸಾಮರ್ಥ್ಯಕ್ಕಳಿಗನುಗುಣವಾಗಿ ಎಲ್ಲಾ ಮಕ್ಕಳಿಗೆ ಸಂಸ್ಥೆಯಿಂದ ಹೊರಗಾಗಲೀ ಅಥವಾ ಒಳಗಾಗಲೀ ಶಿಕ್ಷಣ ಒದಗಿಸಲೇಬೇಕು. ಮುಖ್ಯವಾಹಿನಿಯ ಶಾಲೆ, ಸೇತುಬಂಧ ಶಾಲೆ, ಮುಕ್ತ ಶಾಲೆ, ಔಪಚಾರಿಕವಲ್ಲದ ಶಾಲೆಯಂತಹ ಹಲವು ಶೈಕ್ಷಣಿಕ ಅವಕಾಶಗಳ ಆಯ್ಕೆಯನ್ನು ಮಕ್ಕಳಿಗೆ ನೀಡಬೇಕು. ಶಾಲೆಗೆ ಹೋಗುವ ಮಕ್ಕಳಿಗೆ ಅಗತ್ಯವಿದ್ದಲ್ಲಿ ಹೆಚ್ಚುವರಿ ತರಬೇತಿಯ ವ್ಯವಸ್ಥೆ ಮಾಡಬೇಕು. ದೈಹಿಕವಾಗಿ ಅಥವಾ ಮಾನಸಿಕವಾಗಿ ವಿಶೇಷ ಅಗತ್ಯವಿರುವ ಅಂಗವಿಕಲ ಮಕ್ಕಳಿಗೆ ಕಲಿಕೆಗೆ ಪೂರಕವಾಗುವಂತೆ ವಿಶೇಷ ಶಿಕ್ಷಕರು ಅಥವಾ ವಿಶೇಷ ತರಬೇತುದಾರರನ್ನು ನೇಮಿಸಬೇಕು. ನಿರಂತರವಾಗಿ ಶೈಕ್ಷಣಿಕ ಕಾರ್ಯಕ್ರಮಗಳು ಜರುಗಬೇಕು, ಹಾಜರಾತಿ ದಾಖಲಾತಿ ನಿರ್ವಹಿಸಬೇಕು. ಮಕ್ಕಳಿಗೆ ವಿದ್ಯಾರ್ಥಿವೇತನ ಮತ್ತು ಸಹಾಯಧನ ಸೌಲಭ್ಯ ಒದಗಿಸುವುದು.

**ಪೋಷಕಾಂಶಯುಕ್ತ ಆಹಾರ ಸೌಲಭ್ಯ**

ಮಕ್ಕಳಿಗೆ ದಿನದಲ್ಲಿ ಬೆಳಗಿನ ಉಪಹಾರ ಸೇರಿದಂತೆ ನಾಲ್ಕು ಬಾರಿ ಊಟ ನೀಡಬೇಕು. ಆಹಾರದ ಮೆನುವನ್ನು ವೈದ್ಯರು ಅಥವಾ ಪೋಷಕಾಂಶ ತಜ್ಞರ ಸಲಹೆಯೊಂದಿಗೆ ತಯಾರಿಸಬೇಕು. ಹಾಗೂ ಸಮತೋಲನ ಮತ್ತು ರುಚಿ ವೈವಿಧ್ಯವಿರುವ ಕನಿಷ್ಠ ಪ್ರಮಾಣಿತ ಪೋಷಕಾಂಶಯುಕ್ತ ಆಹಾರಗಳನ್ನು ಪಟ್ಟಿಯಲ್ಲಿ ಸೇರಿಸಬೇಕು. ಈ ಕೆಳಗಿನ ಪಟ್ಟಿಯಲ್ಲಿ ಪ್ರತಿ ಒಂದು ಮಗುವಿಗೆ ಒಂದು ದಿನಕ್ಕೆ ಆಹಾರದಲ್ಲಿ ಬಳಸಬೇಕಾದ ಪದಾರ್ಥಗಳ ಪ್ರಮಾಣವನ್ನು ನೀಡಲಾಗಿದೆ.

**ಕೋಷ್ಟಕ 3: ಮಕ್ಕಳಿಗೆ ನೀಡುವ ಆಹಾರ ಪದಾರ್ಥಗಳ ಪ್ರಮಾಣದ ವಿವರ**

| **ಕ್ರ.ಸಂ.** | **ಆಹಾರದ ಪದಾರ್ಥದ ಹೆಸರು** | **ತಲಾ ದಿನಕ್ಕೆ ಪ್ರಮಾಣ** |
|---|---|---|
| 1. | ಅಕ್ಕಿ / ಗೋಧಿ / ರಾಗಿ / ಜೋಳ | 600 ಗ್ರಾಂ (16–18 ವರ್ಷ ಮಕ್ಕಳಿಗೆ 700 ಗ್ರಾಂ), ಇದರಲ್ಲಿ ಕನಿಷ್ಠ 100 ಗ್ರಾಂ ಗೋಧಿ ಅಥವಾ ರಾಗಿ ಅಥವಾ ಜೋಳ ಅಥವಾ ಅಕ್ಕಿ ಇರಬೇಕು |
| 2. | ಬೇಳೆ / ರಾಜ್ಮಾ / ಕಡಲೆ | 120 ಗ್ರಾಂ |
| 3. | ತಿನ್ನಬಹುದಾದ ಎಣ್ಣೆ, ಈರುಳ್ಳಿ, ಉಪ್ಪು, ಅರಿಶಿನ | ತಲಾ ಒಂದು ಪದಾರ್ಥ 25 ಗ್ರಾಂ |
| 4. | ಕೊತ್ತಂಬರಿ ಪುಡಿ, ಶುಂಠಿ, ಬೆಳ್ಳುಳ್ಳಿ, ಹುಣಸೆ/ಮಾವಿನ ಪುಡಿ | ತಲಾ ಒಂದು ಪದಾರ್ಥ 05 ಗ್ರಾಂ |

| | | |
|---|---|---|
| 5. | ಹಾಲು (ಉಪಹಾರದಲ್ಲಿ) | 150 ಮಿ.ಲೀ |
| 6. | ಒಣ ಮೆಣಸಿನಕಾಯಿ | 05 ಗ್ರಾಂ |
| 7. | ತರಕಾರಿಗಳು – ಹಸಿರು ಎಲೆ | 100 ಗ್ರಾಂ |
| | ತರಕಾರಿಗಳು – ಇತರೆ | 130 ಗ್ರಾಂ |
| 8. | ಮೊಸರು ಮತ್ತು ಮಜ್ಜಿಗೆ | 100 ಗ್ರಾಂ/ಮಿ.ಲಿ |
| 9. | ಕೋಳಿ ಮಾಂಸ (ವಾರಕ್ಕೆ ಒಮ್ಮೆ) ಅಥವಾ ಮೊಟ್ಟೆ (4 ದಿನ) | 115 ಗ್ರಾಂ |
| 10. | ಬೆಲ್ಲ ಮತ್ತು ಕಡಲೆಕಾಯಿ ಬೀಜಗಳು ಅಥವಾ ಪನೀರ್ | ವಾರಕ್ಕೆ ಒಂದು ಬಾರಿ – ಬೆಲ್ಲ 60 ಗ್ರಾಂ + ಕಡಲೆಕಾಯಿ 60 ಗ್ರಾಂ ಅಥವಾ ಪನೀರ್ 100 ಗ್ರಾಂ |
| 11. | ಸಕ್ಕರೆ | 40 ಗ್ರಾಂ |
| 12. | ಚಹಾ / ಕಾಫಿ | 05 ಗ್ರಾಂ |
| 13. | ರವೆ / ಅವಲಕ್ಕಿ, | ತಲಾ ಒಂದು ಪದಾರ್ಥ 150 ಗ್ರಾಂ |
| 14. | ರಾಗಿ | 150 ಗ್ರಾಂ |
| | 50 ಮಕ್ಕಳಿಗೆ ಪ್ರತಿ ದಿನ ಬೇಕಾಗುವ ಪದಾರ್ಥಗಳು | |
| 15. | ಮೆಣಸು | 25 ಗ್ರಾಂ |
| 16. | ಜೀರಿಗೆ | 25 ಗ್ರಾಂ |
| 17. | ಉದ್ದಿನ ಬೇಳೆ, ಸಾಸಿವೆ, ಓಮ್ ಕಾಳು | ತಲಾ ಒಂದು ಪದಾರ್ಥ 50 ಗ್ರಾಂ |
| | 10 ಕೆ.ಜಿ ಕೋಳಿಮಾಂಸ ದಿನಕ್ಕೆ ಬೇಕಾಗುವ ಪದಾರ್ಥಗಳು | |
| 18. | ಗರಂ ಮಸಾಲ | 10 ಗ್ರಾಂ |
| 19. | ಕೊಬ್ಬರಿ (ಒಣ), ಗಸಗಸೆ | ತಲಾ 150 ಗ್ರಾಂ |
| 20. | ಕಡಲೆಕಾಯಿ ಎಣ್ಣೆ | 500 ಗ್ರಾಂ |
| | ಅನಾರೋಗ್ಯಕ್ಕೊಳಗಾದ ಮಕ್ಕಳಿಗಾಗಿ | |
| 21. | ಬ್ರೆಡ್ | 500 ಗ್ರಾಂ |
| 22. | ಹಾಲು | 500 ಮಿ.ಲೀ |
| 23. | ಕಿಚಿಡಿ | 300 ಗ್ರಾಂ |
| 24. | ಎಲ್‌ಪಿಜಿ ಗ್ಯಾಸ್ (ಅಡುಗೆಗೆ ಮಾತ್ರ) – ಇತರೆ | – |

ರಜಾ ದಿನ, ಹಬ್ಬಗಳು, ಸಾಂಸ್ಕೃತಿಕ ಮತ್ತು ಕ್ರೀಡಾ ದಿನ, ರಾಷ್ಟ್ರೀಯ ಹಬ್ಬ ಆಚರಣೆ ಸಂದರ್ಭಗಳಲ್ಲಿ ವಿಶೇಷವಾದ ಊಟವನ್ನು ನೀಡಬೇಕು. ಅನಾರೋಗ್ಯ ಪೀಡಿತರಿಗೆ ವೈದ್ಯರ ಸಲಹೆಯಂತೆ ಆಹಾರ ಒದಗಿಸಬೇಕು. ಮಕ್ಕಳ ದೈಹಿಕ ಅವಶ್ಯಕತೆಗನುಗುಣವಾಗಿ ಕಬ್ಬಿಣಾಂಶ ಮತ್ತು ಫಾಲಿಕ್ ಆಸಿಡ್‌ನ ಮಾತ್ರೆಗಳನ್ನು ಒದಗಿಸಬೇಕು. ಮಕ್ಕಳ ಸಮಿತಿಯೊಂದಿಗೆ ಚರ್ಚಿಸಿ ಊಟದ ಮೆನುವನ್ನು ತಯಾರಿಸಬೇಕು. ಊಟದ ಹಾಲ್‌ನಲ್ಲಿ ಊಟದ ಮೆನುವನ್ನು ಪ್ರದರ್ಶಿಸಬೇಕು. ಋತುಮಾನ ಮತ್ತು

ಪ್ರಾದೇಶಿಕತೆಗೆ ವ್ಯತ್ಯಾಸಕ್ಕೆ ಅನುಗುಣವಾದ ಆಹಾರ ಪದ್ಧತಿಯನ್ನು ಬಳಸಬೇಕು. ಋತುಮಾನಕ್ಕೆ ಅನುಗುಣವಾಗಿ ವಿವಿಧ ಬಗೆಯ ಹಣ್ಣುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಬೇಕು. ಬೆಳಗ್ಗಿನ ಉಪಹಾರ 7:30 ರಿಂದ 8:30ರವರೆಗೆ, ಮಧ್ಯಾಹ್ನದ ಊಟ 12:30 ರಿಂದ 1:30ರವರೆಗೆ, ರಾತ್ರಿ ಊಟ 7:00–8:00ರವರೆಗೆ ಒದಗಿಸಬೇಕು.

### ನೈರ್ಮಲ್ಯ ಮತ್ತು ಸ್ವಚ್ಛತೆ

ಅಡುಗೆಮನೆ, ಡಾರ್ಮೆಟರಿ, ಮನರಂಜನಾ ಕೊಠಡಿ ಮತ್ತು ಬಾಲಮಂದಿರದ ಪ್ರಮುಖ ಸ್ಥಳಗಳಲ್ಲಿ ಮಕ್ಕಳಿಗೆ ಕುಡಿಯುವ ನೀರಿನ ಸೌಕರ್ಯ. ಸ್ನಾನ ಮಾಡಲು ಮತ್ತು ಬಟ್ಟೆ ಒಗೆಯಲು ಬಿಸಿನೀರಿನ ಸೌಕರ್ಯ. ನಿಯಮಿತವಾಗಿ ಸ್ವಚ್ಛಗೊಳಿಸುವ ಒಳಚರಂಡಿ ವ್ಯವಸ್ಥೆ. ಕಸ ವಿಂಗಡಣೆ ಮತ್ತು ಸೂಕ್ತ ವಿಲೇವಾರಿ. ಸೊಳ್ಳೆಗಳ ನಿವಾರಣೆಗೆ ಸಿಂಪಡಣೆ ಮತ್ತು ಪರದೆಯ ವ್ಯವಸ್ಥೆ. ಬಾಲಮಂದಿರದ ಆವರಣದಲ್ಲಿ ಕಳೆ ನಿಯಂತ್ರಿಸುವುದು. ಸಾಕಷ್ಟು ಗಾಳಿ ಬೆಳಕಿನ ವ್ಯವಸ್ಥೆಯಿರುವ ಕನಿಷ್ಠ ಏಳು ಮಕ್ಕಳಿಗೆ ಒಂದು ಶೌಚಾಲಯ ವ್ಯವಸ್ಥೆ ಮತ್ತು ಕನಿಷ್ಠ ಹತ್ತು ಮಕ್ಕಳಿಗೆ ಒಂದು ಸ್ನಾನಗೃಹ ವ್ಯವಸ್ಥೆ. ಶೌಚಾಲಯ ಮತ್ತು ಸ್ನಾನಗೃಹವನ್ನು ದಿನಕ್ಕೆರೆಡು ಬಾರಿ ಸ್ವಚ್ಛಗೊಳಿಸಬೇಕು. ನೊಣಗಳ ಬಾರದಂತಹ ಸ್ವಚ್ಛವಾದ ಅಡುಗೆಮನೆ. ಪಾತ್ರೆ ತೊಳೆಯಲು ಪ್ರತ್ಯೇಕವಾದ ಸ್ಥಳವಿರಬೇಕು. ತಿಂಗಳಿಗೆ ಎರಡು ಬಾರಿ ಹಾಸಿಗೆ ಮತ್ತು ಬಟ್ಟೆಗಳನ್ನು ಬಿಸಿಲಿಗೆ ಒಣಗಿಸಬೇಕು. ಪ್ರತಿದಿನ ಬಾಲಮಂದಿರದ ನೆಲವನ್ನು ಗುಡಿಸಿ–ಒರೆಸಬೇಕು. ಸರಿಯಾಗಿ ತರಕಾರಿ ಮತ್ತು ಹಣ್ಣುಗಳನ್ನು ತೊಳೆದು, ಶುಚಿಯಾಗಿ ಆಹಾರ ತಯಾರಿಸಬೇಕು. ಪ್ರತಿ ಅಡುಗೆಯ ನಂತರವು ಅಡುಗೆಮನೆಯ ಸಜ್ಜೆ, ನೆಲ, ಗ್ಯಾಸ್ ಒಲೆಯನ್ನು ಶುಚಿಗೊಳಿಸಬೇಕು. ಹುಳು ಬೀಳದ ಹಾಗೆ, ಶುಚಿಯಾಗಿ ಆಹಾರ ಧಾನ್ಯಗಳನ್ನು ಸಂಗ್ರಹಿಸಬೇಕು. ವರ್ಷಕೊಮ್ಮೆಯಾದರೂ ಹಾಸಿಗೆಗಳನ್ನು ಕೊಡವಿ ಸೋಂಕಿಲ್ಲದ ರೀತಿ ನೋಡಿಕೊಳ್ಳಬೇಕು, ಸಾಂಕ್ರಾಮಿಕ ಕಾಯಿಲೆ ಕಾಣಿಸಿಕೊಂಡಾಗ ರೋಗಿ ನಿರ್ಗಮನದ ನಂತರ ಸೋಂಕು ನಿವಾರಿಸಲು ಅನಾರೋಗ್ಯದ ಕೊಠಡಿಗೆ ಹೊಗೆ ಹಾಯಿಸಬೇಕು. ವೈದ್ಯಕೀಯ ಕೇಂದ್ರವನ್ನು ಸ್ವಚ್ಛವಾಗಿಡಬೇಕು.

### ಮನೋರಂಜನಾ ಸೌಲಭ್ಯ

ಒಳಾಂಗಣ ಮತ್ತು ಹೊರಾಂಗಣ ಕ್ರೀಡೆ, ಯೋಗ, ಧ್ಯಾನ, ಸಂಗೀತ, ದೂರದರ್ಶನ, ಪ್ರವಾಸ, ವಿಹಾರಗಳು, ಸಾಂಸ್ಕೃತಿಕ ಕಾರ್ಯಕ್ರಮ, ತೋಟಗಾರಿಕೆ, ಗ್ರಂಥಾಲಯ ಸೌಲಭ್ಯಗಳನ್ನು ಒಳಗೊಂಡಿರಬೇಕು. ಹೊರಾಂಗಣ ಕ್ರೀಡೆಗಳಿಗೆ ಸಾಕಷ್ಟು ಸ್ಥಳಾವಕಾಶವಿರಬೇಕು. ಪ್ರವಾಸವು ವಿಜ್ಞಾನ ಮೇಳ, ವಸ್ತು ಸಂಗ್ರಹಾಲಯ, ತಾರಾಲಯ, ಶಿಕ್ಷಣ ಮೇಳ, ಸಸ್ಯೋದ್ಯಾನ, ಪ್ರಾಣಿ ಸಂಗ್ರಹಾಲಯಗಳಿಗೆ ಭೇಟಿ ನೀಡುವುದನ್ನು ಒಳಗೊಂಡಿರಬಹುದು. ರಾಷ್ಟ್ರೀಯ ಹಬ್ಬಗಳ ಸಂದರ್ಭದಲ್ಲಿ ಸಾಂಸ್ಕೃತಿಕ ಅಥವಾ ಕ್ರೀಡಾ ಕಾರ್ಯಕ್ರಮವನ್ನು ಹಾಗೂ ಸ್ಪರ್ಧೆಗಳನ್ನು ಆಯೋಜಿಸಬೇಕು. ಗ್ರಂಥಾಲಯವು ಮಕ್ಕಳಸ್ನೇಹಿ ವಾತಾವರಣ ಹೊಂದಿರಬೇಕು. ಪ್ರಾದೇಶಿಕ ಭಾಷೆಯಲ್ಲಿ ಮಕ್ಕಳ ಸಾಹಿತ್ಯ ಪುಸ್ತಕಗಳಿರಬೇಕು. ಬ್ರೈಲ್ ಪುಸ್ತಕ, ಆಡಿಯೋ–ವಿಡಿಯೊ ಸಾಧನ ಸಂಪನ್ಮೂಲಗಳನ್ನು ಒಳಗೊಂಡಿರಬೇಕು. ಮಕ್ಕಳನ್ನು ಗುಣಪಡಿಸುವ ಪ್ರಕ್ರಿಯೆಯನ್ನು ಹೆಚ್ಚಿಸುವ ಸಲುವಾಗಿ ಸಂಗೀತ, ನೃತ್ಯ ಮತ್ತು ಕಲಾ ಚಿಕಿತ್ಸೆಯನ್ನು ಮನರಂಜನಾ ಚಟುವಟಿಕೆಗಳ ಪಟ್ಟಿಯಲ್ಲಿ ಸೇರಿಸಬಹುದು.

### ವೃತ್ತಿಪರ ಕೌಶಲ್ಯ ತರಬೇತಿ

ಮಕ್ಕಳ ವಯಸ್ಸು, ಕ್ಷಮತೆ, ಆಸಕ್ತಿ, ಸಾಮರ್ಥ್ಯಕ್ಕೆ ಅನುಗುಣವಾಗಿ ಬಾಲಮಂದಿರದ ಹೊರಗೆ ಅಥವಾ ಒಳಗೆ ಲಾಭದಾಯಕ ವೃತ್ತಿಪರ ತರಬೇತಿ ನೀಡಬೇಕು. ವೃತ್ತಿಪರ ತರಬೇತಿಯು ಔದ್ಯೋಗಿಕ ಚಿಕಿತ್ಸೆಯಾಗಿಯು, ಕೌಶಲ್ಯ ಮತ್ತು ಆಸಕ್ತಿಯಾಧಾರಿತ ತರಬೇತಿಯಾಗಿಯು ಇರಬೇಕು. ಸರ್ಕಾರದ

ಮಾನ್ಯತೆಯಿರುವ ಸಂಸ್ಥೆಯಿಂದ ವೃತ್ತಿತರಬೇತಿ ನೀಡಿ, ಕೋರ್ಸ್‌ನ ಕೊನೆಯಲ್ಲಿ ಪ್ರಮಾಣಪತ್ರ ಪಡೆದುಕೊಂಡು ಉದ್ಯೋಗ ಮಾಡುವ ಗುರಿ ಹೊಂದಿರಬೇಕು. ಬಾಲಮಂದಿರದ ಹೊರಗಡೆ ಹೋಗಿ ವೃತ್ತಿ ತರಬೇತಿ ಪಡೆಯುವ ಅಪಾಯದಲ್ಲಿರುವ ಮಕ್ಕಳಿಗೆ ಸೂಕ್ತ ಭದ್ರತೆ ನೀಡಿ ಕರೆದೊಯ್ಯಬೇಕು. ವೃತ್ತಿಪರ ಕೌಶಲ್ಯ ತರಬೇತಿಗಳಲ್ಲಿ ಹಾಜರಾಗುವ ಎಲ್ಲಾ ಮಕ್ಕಳ ದಾಖಲೆ ನಿರ್ವಹಿಸಬೇಕು. ಪ್ರತಿ ಮಗುವು ಸಾಧಿಸಿದ ಪ್ರಗತಿಯನ್ನು ಪರಿಶೀಲಿಸಬೇಕು. ಆ ಸಂಬಂಧ ವರದಿಯನ್ನು ಮೂರು ತಿಂಗಳಿಗೆ ಒಮ್ಮೆ ಮಕ್ಕಳ ಕಲ್ಯಾಣ ಸಮಿತಿಗೆ ಸಲ್ಲಿಸಬೇಕು.

**ಮಕ್ಕಳ ದಿನಚರಿ**

ಪ್ರತಿ ಬಾಲಮಂದಿರವು ಮಕ್ಕಳ ದಿನಚರಿಯನ್ನು ಹೊಂದಿರಬೇಕು. ಬಾಲಮಂದಿರದ ಪ್ರಮುಖ ಜಾಗಗಳಲ್ಲಿ ಆ ದಿನಚರಿಯನ್ನು ಪ್ರದರ್ಶಿಸಿರಬೇಕು. ಸರ್ಕಾರಿ ಬಾಲಮಂದಿರದ ಆರೈಕೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳಲ್ಲಿ ನಿಯಂತ್ರಿತ ಮತ್ತು ಶಿಸ್ತಿನ ಜೀವನವನ್ನು ರೂಢಿಸಲು ನಿರ್ದಿಷ್ಟ ದಿನಚರಿಯ ಪಾಲನೆಯ ಸೌಲಭ್ಯವಿದೆ. ದಿನಚರಿಯಲ್ಲಿ ವೈಯಕ್ತಿಕ ಸ್ವಚ್ಛತೆ, ನೈರ್ಮಲ್ಯ, ದೈಹಿಕ ವ್ಯಾಯಾಮ, ಯೋಗ, ಶೈಕ್ಷಣಿಕ ತರಗತಿಗಳು, ವೃತ್ತಿ ಸಂಬಂಧಿತ ತರಬೇತಿಗಳು, ಆಟೋಟ, ಮನರಂಜನೆ, ನೈತಿಕ ಶಿಕ್ಷಣ, ಗುಂಪು ಚಟುವಟಿಕೆಗಳು, ಪ್ರಾರ್ಥನೆ ಮತ್ತು ಸಮುದಾಯ ಗೀತೆಗಳಿಗೆ ಸಮಯ ನಿಗದಿಪಡಿಸಬೇಕು. ಭಾನುವಾರ ಸೇರಿದಂತೆ ರಜಾದಿನಗಳು, ರಾಷ್ಟ್ರೀಯ ಹಬ್ಬ, ಹಬ್ಬದ ದಿನಗಳಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.

**ಬಾಲಮಂದಿರ ನಿರ್ವಹಣಾ ಸಮಿತಿ**

ಪ್ರತಿ ಬಾಲಮಂದಿರವು ತನ್ನ ವ್ಯವಸ್ಥಿತ ನಿರ್ವಹಣೆಗೆ ನಿರ್ವಹಣಾ ಸಮಿತಿಯನ್ನು ಹೊಂದಿರಬೇಕು. ಮಕ್ಕಳಿಗೆ ಸೂಕ್ತವಾದ ಆರೈಕೆ ಮತ್ತು ಉಪಚಾರ ನೀಡುವ ಸಲುವಾಗಿ ಮಕ್ಕಳನ್ನು ವಯಸ್ಸು, ಅಗತ್ಯವಿರುವ ಆರೈಕೆಯ ಶೈಲಿ, ದೈಹಿಕ–ಮಾನಸಿಕ ಆರೋಗ್ಯ ಮತ್ತು ವಾಸವಿರುವ ಸಮಯ ಆಧಾರದ ಮೇಲೆ ಪ್ರತ್ಯೇಕವಾಗಿರಿಸಬೇಕು. ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ಸಮಿತಿಯ ಅಧ್ಯಕ್ಷರಾದರೆ, ಕಾರ್ಯದರ್ಶಿಯಾಗಿ ಬಾಲಮಂದಿರದ ಉಸ್ತುವಾರಿ ಅಧಿಕಾರಿ/ಅಧೀಕ್ಷಕರು, ಸದಸ್ಯರುಗಳಾಗಿ ಪ್ರೊಬೇಷನರಿ ಅಧಿಕಾರಿ, ಆರೋಗ್ಯ ಅಧಿಕಾರಿ, ಮನೋಶಾಸ್ತ್ರಜ್ಞ/ಮಾನಸಿಕ ಸಮಾಲೋಚಕರು, ವೃತ್ತಿ ಮಾರ್ಗದರ್ಶಕರು, ಶಿಕ್ಷಕರು, ಸಮಾಜ ಕಾರ್ಯಕರ್ತರು ಹಾಗೂ ಬಾಲಮಂದಿರ ಆರೈಕೆ ಮತ್ತು ರಕ್ಷಣೆಯಲ್ಲಿರುವ ಇಬ್ಬರು ಮಕ್ಕಳು ಇರುತ್ತಾರೆ. ಈ ಸಮಿತಿಯು ಪ್ರತಿ ತಿಂಗಳು ಸಭೆ ಸೇರಿ ಬಾಲಮಂದಿರದ ವಸತಿ, ವೈದ್ಯಕೀಯ, ಆಹಾರ, ನೀರು, ನೈರ್ಮಲ್ಯ, ಮಾನಸಿಕ ಆರೋಗ್ಯ, ವೃತ್ತಿ ತರಬೇತಿ, ಮನೋರಂಜನೆ, ಬಾಲಮಂದಿರದ ಸಮಸ್ಯೆಗಳ ಕುರಿತು ಚರ್ಚಿಸಿ ಪರಿಹಾರದ ನಿರ್ಣಯಗಳನ್ನು ಕೈಗೊಂಡು ಅನುಷ್ಠಾನಗೊಳಿಸುತ್ತದೆ.

**ಆರೈಕೆ ನಂತರದ ಯೋಜನೆ**

ಸರ್ಕಾರಿ ಬಾಲಮಂದಿರದಲ್ಲಿ 18 ವರ್ಷ ತುಂಬಿದ ಮಕ್ಕಳನ್ನು ಬಿಡುಗಡೆಗೊಳಿಸಿ ತಕ್ಷಣ ಸಮಾಜದೊಳಗೆ ದೂಡುವುದಿಲ್ಲ ಬದಲಾಗಿ, ಸಮಾಜದ ಮುಖ್ಯವಾಹಿನಿಗೆ ಸೇರಿ ಸ್ವಾವಲಂಬನಾ ಜೀವನಕ್ಕೆ ಅಣಿಯಾಗಲು ಆಫ್ಟರ್ ಕೇರ್ ಫೆಸಿಲಿಟಿ ಅಥವಾ ಅನುಪಾಲನಾ ಗೃಹಗಳಿಗೆ ಕಳುಹಿಸಲಾಗುತ್ತದೆ. 21 ವರ್ಷ ತುಂಬುವವರೆಗೆ ಸಮಾಜದೊಂದಿಗೆ ಹೊಂದಾಣಿಕೆಯಾಗಲು ಪೂರಕವಾದ ಔದ್ಯೋಗಿಕ ಶಿಕ್ಷಣ, ಕೌಶಲ್ಯ, ವಸತಿ ಸೌಕರ್ಯ, ಉದ್ಯೋಗ ನಿಯೋಜನೆ ಮೊದಲಾದ ಸವಲತ್ತುಗಳ ವ್ಯವಸ್ಥೆಯನ್ನು ಸರ್ಕಾರ ಅವರಿಗೆ ಮಾಡಿಕೊಡುತ್ತದೆ.

**ಉಪಸಂಹಾರ**

ಒಂದು ಮನೆಯ ತಳಪಾಯವನ್ನು ಸರಿಯಾಗಿ ಕಟ್ಟಿದ್ದರೆ ಮಾತ್ರ, ಮನೆ ಸುಭದ್ರವಾಗಿ ನಿಲ್ಲುವುದಕ್ಕೆ

ಸಾಧ್ಯ. ಹಾಗೆಯೇ ಮಕ್ಕಳ ಬಾಲ್ಯವನ್ನು ಉಲ್ಲಾಸದಾಯಕವಾಗಿ ಕಟ್ಟಿದ್ದರೆ ಮಾತ್ರ ಉತ್ತಮ ನಾಗರೀಕನನ್ನು ಸೃಷ್ಟಿಸಲು ಸಾಧ್ಯ. ಶೋಷಣೆ ಮತ್ತು ದುರುಪಯೋಗಕ್ಕೊಳಗಾದ ಮಕ್ಕಳ ಬಾಲ್ಯವನ್ನು ಮರುರೂಪಿಸಿ, ಸಮಾಜದೊಳಗೆ ಪುನ: ಸಂಯೋಜಿಸಲು ಬಾಲನ್ಯಾಯ (ಆರೈಕೆ ಮತ್ತು ರಕ್ಷಣೆ) ಕಾಯ್ದೆ–2015 ಸರ್ಕಾರಿ ಬಾಲಮಂದಿರ ವ್ಯವಸ್ಥೆಯನ್ನು ಸ್ಥಾಪನೆ ಮಾಡಿದೆ. ಸರ್ಕಾರಿ ಬಾಲಮಂದಿರದಲ್ಲಿ ಇರಬೇಕಾದ ವಿವಿಧ ಸವಲತ್ತುಗಳನ್ನು ಬಾಲ ನ್ಯಾಯ (ಆರೈಕೆ ಮತ್ತು ರಕ್ಷಣೆ) 2016ರ ಮಾದರಿ ನಿಯಮಗಳು ವಿವರಿಸುತ್ತವೆ. ನಿಯಮಗಳು ಬರೀ ಪುಸ್ತಕದಲ್ಲಿ ಮಾತ್ರವಿದ್ದರೆ ಸಾಲವುದಿಲ್ಲ, ಬದಲಾಗಿ ಪ್ರಾಯೊಗಿಕ ಅನುಷ್ಠಾನವಾಗಿ ಚಾಚು ತಪ್ಪದೇ ಪಾಲನೇ ಆದಲ್ಲಿ ಮಾತ್ರ ಕಾನೂನಿನ ಉದ್ದೇಶ ಪೂರ್ಣಗೊಳ್ಳುವುದು. ಸರ್ಕಾರಿ ಬಾಲಮಂದಿರದಲ್ಲಿ ಮೇಲೆ ಚರ್ಚಿಸಿದ ಎಲ್ಲಾ ಸವಲತ್ತು ತಲುಪಬೇಕಾದರೆ, ಸಂವೇಧನಾಶೀಲ ಅಧಿಕಾರಿ ಸಿಬ್ಬಂದಿಗಳು ಅತ್ಯಗತ್ಯವಾಗಿರುತ್ತಾರೆ. ಬಲಿಪಶುಗಳಾದ ಮಕ್ಕಳಿಗೆ ಬರೀ ಅನುಕಂಪ ತೋರದೆ ಅನುಭೂತಿಯಿಂದ ಪುನ: ಜೀವನವನ್ನು ಮರುಕಟ್ಟಲು, ಸಿಬ್ಬಂದಿವರ್ಗ ನೆರವಾಗಬೇಕು. ಸಮಾಜದಲ್ಲಿ ಬಿಕ್ಕಟ್ಟಿನಲ್ಲಿ ಬದುಕುತ್ತಿರುವ ಆರೈಕೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳನ್ನು ಗುರುತಿಸಿ, ಸರ್ಕಾರಿ ಬಾಲಮಂದಿರ ವ್ಯವಸ್ಥೆಯ ಸದುಪಯೋಗಪಡೆದುಕೊಳ್ಳುವಂತೆ ಮಾಡುವುದು ಎಲ್ಲಾ ಪ್ರಜೆಗಳ ಆದ್ಯ ಕರ್ತವ್ಯವಾಗಿದೆ. ಸರ್ಕಾರ ಇದಕ್ಕೆ ಪೂರಕವಾಗಿ ಅಗತ್ಯ ಪ್ರಚಾರಗಳನ್ನು ಕೂಡ ಮಾಡಬೇಕಿದೆ.

**ಪರಾಮರ್ಶನ ಗ್ರಂಥಗಳು**


- ಇಂಡಿಯಾ. ಆಫೀಸ್ ಆಫ್ ದ ರಿಜಿಸ್ಟ್ರಾರ್ ಜೆನೆರಲ್ ಅಂಡ್ ಸೆನ್ಸಸ್ ಕಮೀಷನರ್. (2013). *ಸೆನ್ಸಸ್ ಆಫ್ ಇಂಡಿಯ 2011: ಪ್ರೊವಿಷಿನಲ್ ಪಾಪ್ಯುಲೇಷನ್ ಟೋಟಲ್ಸ್ (ಸಿರೀಸ್ 1).* ಮಿನಿಸ್ಟ್ರಿ ಆಫ್ ಹೋಮ್ ಆಫೇರ್ಸ್
- ಖಲಕದಿನ, ಎಂ. (1979). *ಅರ್ಲಿ ಚೈಲ್ಡ್ ಕೇರ್ ಇನ್ ಇಂಡಿಯಾ.* ರೌಟ್ಲೆಡ್ಜ್.
- ಕುಮಾರ್, ವಿ. (2009), *ಎನ್ಸೈಕ್ಲೋಪೀಡಿಯ ಆಫ್ ಚೈಲ್ಡ್ ವೆಲ್ಫೇರ್ ಅಂಡ್ ಪ್ರೊಟೆಕ್ಷನ್* (ವಾಲ್ಯೂಮ್ 2). ಅನ್ಮೋಲ್ ಪಬ್ಲಿಕೇಷನ್ಸ್ ಪ್ರೈ.ಲಿ.
- ಪುಲ್ಯೆನಿ, ಎಸ್. (2018). *ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣಾ) ಅಧಿನಿಯಮ, 2015ರ ಜೊತೆಗೆ ಬಾಲನ್ಯಾಯ (ಮಕ್ಕಳ ಕ್ಷೇಮ ಮತ್ತು ರಕ್ಷಣಾ) ಮಾದರಿ ನಿಯಮಗಳು, 2016.* ಕರ್ನಾಟಕ ಲಾ ಜರ್ನಲ್ ಪಬ್ಲಿಕೇಷನ್.
- ಸರಸ್ವತಿ, ಟಿ. ಎಸ್., ಮೆನನ್, ಎಸ್ & ಮದನ್,ಎ. (2018) *ಚೈಲ್ಡುಹುಡ್ಸ್ ಇನ್ ಇಂಡಿಯಾ: ಟ್ರೆಡೀಷನ್ಸ್, ಟ್ರೆಂಡ್ಸ್ ಅಂಡ್ ಟ್ರನ್ಸಫಾರ್ಮೇಷನ್ಸ್.* ರೌಟ್ಲೆಡ್ಜ್.
- ಸೆನ್, ಎಸ್. (2005). *ಕಲೋನಿಯಲ್ ಚೈಲ್ಡ್‌ಹುಡ್ಸ್: ದ ಜುವಿನೈಲ್ ಪೆರಿಫೆರಿ ಆಫ್ ಇಂಡಿಯ, 1850–1945,* ಆಂಥೆಂ ಪ್ರೆಸ್.
- ಯಾದವ್, ಆರ್. ಕೆ., & ರಾಹುಲ್, ಎಸ್. ಕೆ. (2021). *ಲೈಫ್ ಆಫ್ ಚಿಲ್ಡ್ರನ್ ಅಟ್ ಚೈಲ್ಡ್ ಕೇರ್ ಇನ್ಸಟಿಟ್ಯೂಷನ್ಸ್ ಇನ್ ಇಂಡಿಯಾ: ಎ ಹಿಡನ್ ಟ್ರುತ್.* ಸತ್ಯಂ ಬುಕ್ಸ್ ಪ್ರೈ.
- ಯೇವಲೆ, ಪಿ. (2019). ಮ್ಯಾಪಿಂಗ್ ಲಾಂಗ್–ಟರ್ಮ್ ಔಟ್‌ಕಮ್ಸ್ ಆಫ್ ಇನ್‌ಸ್ಟಿಟ್ಯೂಷನಲೈಸೇಶನ್ ಫಾರ್ ಚಿಲ್ಡನ್ ಇನ್ ನೀಡ್ ಆಫ್ ಕೇರ್ ಅಂಡ್ ಪ್ರೊಟೆಕ್ಷನ್ ಇನ್ ಇಂಡಿಯಾ. ಮೇಕ್ ಎ ಡಿಫರೆನ್ಸ್